ಫೋನ್ : 08134 - 251067

ಕಲ್ಪತರು ವಿದ್ಯಾ ಸಂಸ್ಥೆ (ರಿ.)

# ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು


**ತಿಪಟೂರು - 572 201.**

**(ತುಮಕೂರು ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾಗಿದೆ)**

ರಾಷ್ಟ್ರೀಯ ಮೌಲ್ಯಮಾಪನ ಸಂಸ್ಥೆಯಾದ **NAAC** ನಿಂದ **"A"** ಗ್ರೇಡ್ ಪುರಸ್ಕೃತ ಕಾಲೇಜು

Email : kfgscprinci@gmail.com Website : www.kfgsctiptur.in

## ವಿವರಣ ಪುಸ್ತಕ



राष्ट्रीय मूल्यांकन एवं प्रत्यायन परिषद

विश्वविद्यालय अनुदान आयोग का स्वायत्त संस्थान

**NATIONAL ASSESSMENT AND ACCREDITATION COUNCIL**

*An Autonomous Institution of the University Grants Commission*

# Certificate of Accreditation

The Executive Committee of the
National Assessment and Accreditation Council
on the recommendation of the duly appointed
Peer Team is pleased to declare the

## Kalpataru First Grade Science College

Tiptur, Tumkur,
affiliated to Tumkur University, Karnataka as
Accredited
with CGPA of 3.07 on seven point scale
at A grade
valid up to September 15, 2021

Date : September 16, 2016

Director

ಕಲ್ಪತರು ವಿದ್ಯಾ ಸಂಸ್ಥೆ (ರಿ.) ತಿಪಟೂರು.

ಫೋನ್ : 08134 - 251067

# ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು

(ತುಮಕೂರು ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾಗಿದೆ.)

ರಾಷ್ಟ್ರೀಯ ಮೌಲ್ಯಮಾಪನ ಸಂಸ್ಥೆ NAAC ನಿಂದ "A" ಗ್ರೇಡ್ ಪುರಸ್ಕೃತ ಕಾಲೇಜು

**ತಿಪಟೂರು - 572 201.**

**ವಿದ್ಯಾ ಸಂಸ್ಥೆಯ ಕಿರು ಪರಿಚಯ**

**ಹಾಗೂ**

**ಕಾಲೇಜಿನ ಬೋಧಕ ಹಾಗೂ ಬೋಧಕೇತರ ವರ್ಗ,**

**ಲಭ್ಯವಿರುವ ಅಧ್ಯಯನ ವಿಷಯಗಳು ಮತ್ತು**

**ಇತರೆ ಸೌಲಭ್ಯಗಳ**

# ಮಾಹಿತಿ ಪುಸ್ತಕ

*Kalpataru First Grade Science College, Tiptur.*

# ಕಲ್ಪತರು ವಿದ್ಯಾ ಸಂಸ್ಥೆ (ರಿ.)

# ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು.

ಕನ್ನಡ ನಾಡಿನ ಹೆಸರಾಂತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿರುವ ತಿಪಟೂರಿನ ಕಲ್ಪತರು ವಿದ್ಯಾ ಸಂಸ್ಥೆ ಮತ್ತು ಕಲ್ಪತ ಪ್ರಥಮ ದರ್ಜೆ ವಿಜ್ಞಾನ ಕಾಲೇಜು ತನ್ನ 59 ವರ್ಷಗಳ ಸಾರ್ಥಕ ಸೇವೆಯಿಂದ ಗ್ರಾಮೀಣ ಪ್ರದೇಶದ ವಿದ್ಯಾಭಿವೃದ್ಧಿಯ ಒಂದು ಮಹತ್ತರ ಪಾತ್ರ ವಹಿಸಿ, ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿದೆ. 1961 ರಲ್ಲಿ ಪ್ರಾತಃ ಸ್ಮರಣೀಯ ಮ ಚೇತನ ಶ್ರೀ ಅಡವಪ್ಪ ಚನ್ನವೀರಪ್ಪ ಪಲ್ಲಾಗಟ್ಟೆ ಅವರು ಉದಾರ ಮನಸ್ಸಿನಿಂದ ಒಂದು ಲಕ್ಷ ರೂ.ಗಳ ಧನ ಸಹಾಯ ಮ ಮೂಲ ಪ್ರೇರಕ ಶಕ್ತಿಯಾಗಿ ರಾಷ್ಟ್ರೀಯ ಭಾವನೆಗಳ ಉದ್ದೀಪನ, ನೈತಿಕತೆ, ಕಲೆ, ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ ಮುಂತ ಹತ್ತು ಹಲವಾರು ರೀತಿಯಲ್ಲಿ ಗ್ರಾಮೀಣ ಯುವ ಸಮುದಾಯ ಪಾಲ್ಗೊಳ್ಳುವುದಕ್ಕೆ ಸಾಧನವಾಗಬಲ್ಲ ಶೈಕ್ಷಣಿಕ ಉದ್ದೇಶವ ಮೂಲ ಗುರಿಯಾಗಿಟ್ಟುಕೊಂಡು, ಪರೋಪಕಾರ ನಿರತರಾದ ಇನ್ನಿತರ ಸಹಚರರ ನೆರವಿನೊಂದಿಗೆ ಕಲ್ಪತರು ವಿದ್ಯಾ ಸಂಸ್ಥೆಯ ಸ್ಥಾಪಿಸಿ, ಸಂಸ್ಥಾಪಕ ಅಧ್ಯಕ್ಷರಾಗಿ (1961 ರಿಂದ 1969 ), ಸಂಸ್ಥೆಯ ಸರ್ವಾಂಗೀಣ ಪ್ರಗತಿಗಾಗಿ ಅವಿರತ ಸೇವೆ ಸಲ್ಲಿಸಿ ಚಿರಸ್ಮರಣೀಯರೂ, ಅಮರರೂ ಆಗಿದ್ದಾರೆ.

ಪುಣ್ಯ ಪುರುಷರ ಮಹಾ ಸಂಕಲ್ಪದಿಂದ ಅಸ್ತಿತ್ವಕ್ಕೆ ಬಂದ ಕಲ್ಪತರು ವಿದ್ಯಾ ಸಂಸ್ಥೆ ಜ್ಞಾನಗಂಗೆಯನ್ನು ನಾಡಿನುದ್ದಕ ಹರಿಸಿ ಪಾವನಗೊಳಿಸುತ್ತಿರುವುದು ಸರ್ವಜನವಿದಿತ. 1962 ರಲ್ಲಿ **''ಕಲ್ಪತರು ಮಹಾ ವಿದ್ಯಾಲಯ''** ವೆಂದು ಒಂದ ಪ್ರಾರಂಭಗೊಂಡು, ಇಂದು **'ಟಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಪದವಿ ಮಹಾ ವಿದ್ಯಾಲಯ'', ''ಪಲ್ಲಾಗಟ್ಟೆ ಅಡವಪ್ಪ ಕಲ ಮತ್ತು ವಾಣಿಜ್ಯ ಪದವಿ ಮಹಾ ವಿದ್ಯಾಲಯ'', ''ಕಲ್ಪತರು ಪದವಿ ಪೂರ್ವ ಕಾಲೇಜು'', 'ಕಲ್ಪತರು ಮಾಂಟೆಸ್ಸೋರಿ ಶಾಲ '' ಕಲ್ಪತರು ಸೆಂಟ್ರಲ್ ಸ್ಕೂಲ್ '', '' ಕಲ್ಪತರು ಕಾಲೇಜ್ ಆಫ್ ಎಜುಕೇಶನ್ ''** ಮತ್ತು **'' ಕಲ್ಪತರು ತಾಂತ್ರಿಕ ಮಹಾ ವಿದ್ಯಾಲಯ** ಎಂಬ ಹೆಸರುಗಳಿಂದ ಜ್ಞಾನದೇಗುಲವಾಗಿರುವುದು ಹೆಮ್ಮೆಯ ಸಂಕೇತ. ಶಾಖೋಪಶಾಖೆಯಿಂದ ಬೆಳೆದು ನಿಂತ ಮಹಾವೃಕ್ಷದ ನೆರಳನ್ನಾಶ್ರಯಿಸಿ ಫಲವನ್ನಾಸ್ವಾದಿಸಿ ಸಾವಿರಾರು ವಿದ್ಯಾರ್ಥಿಗಳು ಪುನೀತರಾಗಿದ್ದಾರೆ. ಪದವಿ ವಿಭೂಷಿತರಾ ದೇಶದಾದ್ಯಂತ ಹಾಗೂ ವಿದೇಶಗಳಲ್ಲಿ ವಿವಿಧ ಸ್ಥಾನಗಳನ್ನಲಂಕರಿಸಿ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಸೇವೆಯಲ್ಲಿ ನಿರತರಾಗಿದ್ದಾರೆ. **ಇವೆಲ್ಲವುಗಳ ಜೊತೆ ಇಂಡಿಯನ್ ಮಾಂಟೆಸ್ಸೋರಿ ಟ್ರೈನಿಂಗ್ ಕೋರ್ಸ್‌ನ್ನು ಸಹ ಪ್ರಾರಂಭಿಸಿರುವುದ ಅತ್ಯಂತ ಹೆಮ್ಮೆಯ ವಿಷಯ**. ಈ ಕೋರ್ಸ್ ಪೂರೈಸಿದವರು ತಾವೇ ಒಂದು ಮಾಂಟೆಸ್ಸೋರಿ ಶಾಲೆ ತೆರೆಯಬಹುದ ಅಥವಾ ಮಾಂಟೆಸ್ಸೋರಿ ಶಾಲಾ ಶಿಕ್ಷಕರಾಗಬಹುದು.

1962 ರಲ್ಲಿ ಅಸ್ತಿತ್ವಕ್ಕೆ ಬಂದ ಕಲ್ಪತರು ಕಾಲೇಜಿನ ಸಂಸ್ಥಾಪಕ ಪ್ರಾಂಶುಪಾಲರಾಗಿದ್ದ ಲಿ॥ ಶ್ರೀ ಜೆ.ಆರ್.ಮಹಾಲಿಂಗಯ ನವರು ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗಾಗಿ ಸಲ್ಲಿಸಿದ ಸೇವೆ ಚಿರಸ್ಮರಣೀಯ. 1982 ರಲ್ಲಿ ಕಲ್ಪತರು ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ ಮೂರು ಸಾವಿರವನ್ನು ದಾಟಿದ ಪ್ರಯುಕ್ತ ಆಡಳಿತ ಸೌಕರ್ಯ, ಶಿಸ್ತು ಪರಿಪಾಲನೆ ಹಾಗೂ ಹೆಚ್ಚು ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಕಾಲೇಜನ್ನು ವಿಭಜನೆಗೊಳಿಸಲಾಯಿತು. ವಿಜ್ಞಾನಕ್ಕೆ ಸಂಬಂಧಿಸಿದ ಶಾಖೆಗಳನ್ನು ಒಂದುಗೂಡಿಸಿ **ಕಲ್ಪತರು ವಿಜ್ಞಾನ ಕಾಲೇಜೆಂದು** ಹೆಸರಿಡಲಾಯಿತು. ಕಲೆ ಮತ್ತು ವಾಣಿಜ್ಯ ವಿಭಾಗಕ್ಕೆ **ಶ್ರೀಯುತ ಪಲ್ಲಾಗಟ್ಟೆ ಅಡವಪ್ಪನವರ** ಹೆಸರಿಟ್ಟು ಅವರ ಹೆಸರನ್ನು ಅಜರಾಮರಗೊಳಿಸಲಾಯಿತು.

2016-17 ರ ಶೈಕ್ಷಣಿಕ ವರ್ಷದಲ್ಲಿ **"ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತು" (NAAC)** ಪಾಸಣಾ ಸಮಿತಿಯವರು ನಮ್ಮ ಕಾಲೇಜಿಗೆ ಭೇಟಿ ನೀಡಿ ಸಮಗ್ರ ತಪಾಸಣೆ ನಡೆಸಿ ವರದಿ ಸಲ್ಲಿಸಿದ್ದು, ಸುಸಜ್ಜಿತ ಕಟ್ಟಡಗಳು, ಧುನಿಕ ಉಪಕರಣಗಳಿಂದ ಕೂಡಿದ ICT ಪ್ರಯೋಗಾಲಯಗಳು, ICT ಉಪನ್ಯಾಸ ಕೊಠಡಿಗಳು, ಹಿರಿಯ ಅನುಭವಿ ಪನ್ಯಾಸಕರು, ಒಳಾಂಗಣ ಕ್ರೀಡಾಂಗಣ ಮನೋಲ್ಲಾಸ ನೀಡುವ ದಟ್ಟ ಹಸಿರು ಪರಿಸರ ಮತ್ತು ವಿಶಾಲ ಕ್ರೀಡಾ ಮೈದಾನ, ಪದ್ಧರಿತ ಗ್ರಂಥಾಲಯ, ಉತ್ತಮ ವಿದ್ಯಾರ್ಥಿ-ವಿದ್ಯಾರ್ಥಿನಿಯರ ನಿಲಯಗಳು , ಉತ್ತಮ ಫಲಿತಾಂಶ, ಪ್ರತಿ ವರ್ಷವೂ ್ಯಾಂಕ್‌ಗಳು, ಉತ್ತಮ ಕ್ರೀಡಾ ಸಾಧನೆ, ಪೋಷಕರು, ಉಪನ್ಯಾಸಕರು ಹಾಗೂ ಕಛೇರಿ ಸಿಬ್ಬಂದಿ ನಡುವಿನ ಉತ್ತಮ ಬಾಂಧವ್ಯ, ಎಲ್ಲದರ ನೇತೃತ್ವ ವಹಿಸಿರುವ ಪ್ರಾಂಶುಪಾಲರ ಕಾರ್ಯದಕ್ಷತೆ, ದೂರದೃಷ್ಟಿಗಳ ಜೊತೆಗೆ ಎಲ್ಲಾ ವಿಚಾರಗಳಲ್ಲೂ ಸಕಾರಾತ್ಮಕ ಂಬಲ ನೀಡುತ್ತಿರುವ ಕಲ್ಪತರು ವಿದ್ಯಾ ಸಂಸ್ಥೆಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಹಕಾರ ಇವುಗಳ ಮೌಲ್ಯಮಾಪನ ಾಡಿ ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನ ಮರುಮೌಲ್ಯೀಕರಣದಲ್ಲಿ CGPA : 3.07 ಅಂಕಗಳೊಂದಿಗೆ **A"** ಗ್ರೇಡ್ ಮಾನ್ಯತೆ ನೀಡಿದ್ದು, ತುಮಕೂರು ವಿಶ್ವವಿದ್ಯಾಲಯಕ್ಕೆ ಅತಿ ಹೆಚ್ಚು ಅಂಕ ಪಡೆದ ಕಾಲೇಜಾಗಿರುತ್ತದೆ.

ಲಿ॥ ಶ್ರೀ ಡಿ.ಎಂ.ಶಂಕರಪ್ಪನವರು ಕಲ್ಪತರು ವಿದ್ಯಾ ಸಂಸ್ಥೆಯ ಉಪಾಧ್ಯಕ್ಷರಾಗಿ, ನಂತರ 1969 ರಿಂದ 1977 ವರೆಗೆ ಅಧ್ಯಕ್ಷರಾಗಿ ಕಾಲೇಜಿನ ಅಭಿವೃದ್ಧಿಗೆ ಮತ್ತು ಪ್ರಗತಿಗೆ ಶ್ರಮಿಸಿದ್ದಾರೆ. ಗ್ರಂಥಾಲಯ ಕಟ್ಟಡಕ್ಕೆ ಉದಾರವಾಗಿ ದಾನ ೀಡಿದ್ದಾರೆ. 1977 ರಿಂದ 1994 ರವರೆಗೆ ಕಲ್ಪತರು ವಿದ್ಯಾಸಂಸ್ಥೆಯ ಅಧ್ಯಕ್ಷರೂ ಹಾಗೂ ಕರ್ನಾಟಕ ಸರ್ಕಾರದ ಸಚಿವರೂ ಗಿದ್ದ ಲಿ॥ ಶ್ರೀ ಟಿ.ಎಂ.ಮಂಜುನಾಥ್ ಅವರು 1986 ರಲ್ಲಿ ತಮ್ಮ ಸಹಚರರ ನೆರವಿನೊಂದಿಗೆ ಭಗೀರಥ ಪ್ರಯತ್ನ ಮಾಡಿ ಲ್ಪತರು ತಾಂತ್ರಿಕ ಮಹಾವಿದ್ಯಾಲಯವನ್ನು ಸ್ಥಾಪಿಸುವಲ್ಲಿ ಯಶಸ್ವಿ ಆದರು. ಇದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಾಂತ್ರಿಕ ಶಿಕ್ಷಣ ಪಡೆದು ಪದವೀಧರರಾಗಿ ದೇಶ ವಿದೇಶಗಳಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಟಿ.ಎಂ. ಮಂಜುನಾಥ್ ಅವರ ಸಮರ್ಥ ಸಾರಥ್ಯ ಹಾಗೂ ನಿಸ್ವಾರ್ಥ ಸೇವೆಯಿಂದ ಕಲ್ಪತರು ವಿದ್ಯಾ ಸಂಸ್ಥೆ ಗಣನೀಯ ಪ್ರಗತಿ ಸಾಧಿಸಿತೆಂದರೆ ತಿಶಯೋಕ್ತಿಯಾಗಲಾರದು. ಲಿ॥ ಶ್ರೀ ಜಿ.ಆರ್. ಕರಿಸಿದ್ದಾರಾಧ್ಯರವರು ಸಂಸ್ಥಾಪಕ ಕೋಶಾಧ್ಯಕ್ಷರಾಗಿ 1961 ರಿಂದ 994 ರವರೆಗೆ ಕಾರ್ಯ ನಿರ್ವಹಿಸಿ ನಂತರ 1994 ರಿಂದ 2000 ದ ವರೆಗೆ ಸಂಸ್ಥೆಯ ಅಧ್ಯಕ್ಷರಾಗಿ, ನಂತರ ಗೌರವಾಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸಿರುತ್ತಾರೆ. ನಂತರ ಅಧ್ಯಕ್ಷರಾಗಿ ಶ್ರೀ ಪಿ.ಕೆ.ತಿಪ್ಪೇರುದ್ರಪ್ಪನವರು 2000 ರಿಂದ 007 ರವರೆಗೆ ದಕ್ಷತೆಯಿಂದ ಕಾರ್ಯ ನಿರ್ವಹಿಸಿರುತಾರೆ. ತದನಂತರ ಶ್ರೀ ಎನ್. ಬಸವಯ್ಯನವರು 1977 ರಿಂದ ಲ್ಪತರು ವಿದ್ಯಾ ಸಂಸ್ಥೆಯ ಕಾರ್ಯದರ್ಶಿಗಳಾಗಿ, ಹಾಗು 2007 ರಿಂದ 2014 ರವರೆಗೆ ಕಲ್ಪತರು ವಿದ್ಯಾ ಸಂಸ್ಥೆಯ ಅಧ್ಯಕ್ಷರಾಗಿ ಡೀ ಸಂಸ್ಥೆಯ ಸರ್ವಾಂಗೀಣ ಅಭಿವೃದ್ಧಿಗೆ ಅವಿರತವಾಗಿ ಶ್ರಮಿಸಿದ್ದಾರೆ. ಮತ್ತೊಮ್ಮೆ ಶ್ರೀ ಪಿ.ಕೆ.ತಿಪ್ಪೇರುದ್ರಪ್ಪನವರು 2014 ಂದ 2021ರವರೆಗೆ ಮತ್ತು 2021 ರಿಂದ ಮತ್ತೊಂದು ಅವಧಿಗೆ ಸಂಸ್ಥೆಯ ಅಧ್ಯಕ್ಷರಾಗಿ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್, ಇನ್‌ಫರ್ಮೇಶನ್ ಸೈನ್ಸ್, ಮೈಕಾನಿಕಲ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ಇಂಜಿನಿಯರಿಂಗ್, ಸಿವಿಲ್ ಇಂಜಿನಿಯರಿಂಗ್, ಎಂ.ಬಿ.ಎ ಮತ್ತು ಎಂ.ಟೆಕ್., ಶಿಕ್ಷಣ ನೀಡಲಾಗುತ್ತಿದೆ.

ಸುಮಾರು 5 ಕೋಟಿ ರೂಪಾಯಿ ವೆಚ್ಚದಲ್ಲಿ ಆಡಳಿತ ಕಛೇರಿಯ ನಿರ್ಮಾಣವಾಗಿದ್ದು ಅದು ಸನ್ಮಾನ್ಯ ರಾಜ್ಯಪಾಲರಿಂದ ಉದ್ಘಾಟನೆಗೊಂಡಿದೆ. ಹಾಗೂ 2 ಕೋಟಿ ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗಿದೆ ಹಾಗೂ ಮರದ ಹಾಸಿನ ಬ್ಯಾಡ್‌ಮಿಟನ್ ಕೋರ್ಟ್‌ಗಳನ್ನು ನಿರ್ಮಿಸಲಾಗಿದೆ. ಯು.ಜಿ.ಸಿ. ಹಾಗೂ ಕಲ್ಪತರು ವಿದ್ಯಾ ಸಂಸ್ಥೆಯ ಸಹಯೋಗದೊಂದಿಗೆ ಸುಮಾರು ಮೂರು ಕೋಟಿ ರೂ.ಗಳ ವೆಚ್ಚದಿಂದ ವಿದ್ಯಾರ್ಥಿನಿಯರ ಹಾಸ್ಟೆಲ್ ನಿರ್ಮಾಣಗೊಂಡಿದೆ. ಯು.ಜಿ.ಸಿ ಅನುದಾನ, ಹಾಗೂ ಕಲ್ಪತರು ವಿದ್ಯಾ ಸಂಸ್ಥೆಯ ನೆರವಿನೊಂದಿಗೆ 2 ಕೋಟಿ ವೆಚ್ಚದಲ್ಲಿ ಕ್ರೀಡಾ ವಸತಿ ನಿಲಯ ಹಾಗೂ ಹೊರಾಂಗಣ ಕ್ರೀಡಾಂಗಣ ನಿರ್ಮಾಣಗೊಂಡಿದೆ. ಜಾತಿ ಮತದ ಚೌಕಟ್ಟಿನಿಂದ ಹೊರಬಂದು ಸಿದ್ದಯ್ಯ ಪುರಾಣಿಕರ ನುಡಿಮುತ್ತಿನಂತೆ " **ಏನಾದರೂ ಆಗು ಮೊದಲು ಮಾನವನಾಗು** " ಎಂಬ ವಾಣಿಯನ್ನು ಸದಾ ಗಮನದಲ್ಲಿಟ್ಟುಕೊಂಡು ನಿಯಮಿತ ಅಭ್ಯಾಸ, ರಚನಾತ್ಮಕ ಕೆಲಸ ಕಾರ್ಯಗಳಲ್ಲಿ ವಿದ್ಯಾರ್ಥಿಗಳು ತೊಡಗುವಂತಾಗಬೇಕು. ತಂದೆ-ತಾಯಿ, ಗುರು-ಹಿರಿಯರಲ್ಲಿ ಶ್ರದ್ಧಾಪೂರ್ವಕ ಭಕ್ತಿ- ಗೌರವಗಳೊಂದಿಗೆ, ಸಹಪಾಠಿಗಳೊಂದಿಗೆ ಸ್ನೇಹ - ಸಹಕಾರ - ಆತ್ಮೀಯತೆಯೊಂದಿಗೆ ಈ ಸುಂದರ ಪರಿಸರದಲ್ಲಿ ನಿಮ್ಮ ವ್ಯಕ್ತಿತ್ವ ಪರಿಪೂರ್ಣವಾಗಿ ಅರಳಲೆಂದು ಹಾರೈಸಿ, ಬುದ್ಧಿ ವಿಕಾಸವಾಗಲಿ, ವಿಕಾರವಾಗದಿರಲಿ ಎಂದು ನಿಮ್ಮನ್ನು ಸ್ವಾಗತಿಸುತ್ತೇವೆ.

ಶಿಕ್ಷಣದ ಮೊದಲ ಹೆಜ್ಜೆಯಿಂದ ಪ್ರಾರಂಭಿಸಿ, ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣದ ಹೆಜ್ಜೆಯವರೆವಿಗೂ, ಸಾಮಾಜಿಕ ಸೇವಾ ಅಭಿಲಾಷೆಯೊಂದಿಗೆ ಶಿಕ್ಷಣವನ್ನು ಮಾನದಂಡವಾಗಿಸಿಕೊಂಡು ವಿದ್ಯಾರ್ಥಿಗಳನ್ನು ಪೂರಕವಾಗಿಸಿ ಹೊಸ ಹೊಸ ಯೋಜನೆ ಮತ್ತು ಸಂಯೋಜನೆಗಳ ಮುಖಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವುದು ನಮ್ಮ ಸಂಸ್ಥೆಯ ಪದಾಧಿಕಾರಿಗಳ ಅಭಿಲಾಷೆಯಾಗಿದೆ. ನಮ್ಮ ವಿದ್ಯಾರ್ಥಿಗಳು ಈ ಆದರ್ಶಗಳ ದಾರಿಯಲ್ಲೇ ಸಾಗುತ್ತಿರುವುದು ನನಗೆ ತುಂಬಾ ಸಂತೋಷ ತಂದಿದೆ.

**ಡಾ. ಚಿತ್ತರಂಜನ್ ರೈ**
ಪ್ರಾಂಶುಪಾಲರು



**ಶ್ರೀ ಪಿ.ಕೆ. ತಿಪ್ಪೇರುದ್ರಪ್ಪ**

ಅಧ್ಯಕ್ಷರು, ಕಲ್ಪತರು ವಿದ್ಯಾ ಸಂಸ್ಥೆ, ತಿಪಟೂರು.



**ಶ್ರೀ ಬಿ.ಎಸ್. ಬಸವರಾಜು**
ಉಪಾಧ್ಯಕ್ಷರು




**ಶ್ರೀ ಬಾಗೇಪಲ್ಲಿ ನಟರಾಜ್**
ಉಪಾಧ್ಯಕ್ಷರು



**ಶ್ರೀ ಜಿ.ಪಿ. ದೀಪಕ್**
ಉಪಾಧ್ಯಕ್ಷರು




**ಶ್ರೀ ಬಿ.ಎಸ್. ಉಮೇಶ್**
ಉಪಾಧ್ಯಕ್ಷರು



**ಶ್ರೀ ಟಿ.ಯು. ಜಗದೀಶ್‌ಮೂರ್ತಿ**
ಕಾರ್ಯದರ್ಶಿಗಳು




**ಶ್ರೀ ಜಿ.ಎಸ್. ಉಮಾಶಂಕರ್**
ಕಾರ್ಯದರ್ಶಿಗಳು



**ಶ್ರೀ ಟಿ.ಎಸ್. ಶಿವಪ್ರಸಾದ್**
ಖಜಾಂಚಿಗಳು



**ಶ್ರೀ ಎಂ.ಆರ್. ಸಂಗಮೇಶ್**
ಕಾರ್ಯದರ್ಶಿಗಳು



**ಶ್ರೀ ಹೆಚ್.ಜಿ. ಸುಧಾಕರ್**
ಕಾರ್ಯದರ್ಶಿಗಳು




**ಡಾ. ಚಿತ್ತರಂಜನ್ ರೈ**, ಎಂ.ಎಸ್‌ಸಿ.,ಪಿಹೆಚ್.ಡಿ.,

ಪ್ರಾಂಶುಪಾಲರು

ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು

# ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು.

## ಬೋಧಕ ವರ್ಗ

**ಪ್ರಾಂಶುಪಾಲರು : ಡಾ. ಚಿತ್ತರಂಜನ್ ರೈ,** ಎಂ.ಎಸ್ಸಿ.,ಪಿಎಚ್.ಡಿ.,

**ಕನ್ನಡ ವಿಭಾಗ :**

| | | |
|---|---|---|
| **ಪ್ರೊ. ಟಿ.ಎಸ್.ಕಾಂತರಾಜಯ್ಯ,** ಎಂ.ಎ., | ಸಹಾಯಕ ಪ್ರಾಧ್ಯಾಪಕರು | ವಿಭಾಗದ ಮುಖ್ಯಸ್ಥರು. |
| **ರಮೇಶ್ ಡಿ.ಎನ್.,** ಎಂ.ಎ.,ಎನ್.ಇ.ಟಿ.,ಬಿ.ಇಡಿ., | ಉಪನ್ಯಾಸಕರು | |

**ಇಂಗ್ಲಿಷ್ ವಿಭಾಗ :**

| | | |
|---|---|---|
| **ಪ್ರೊ. ಬಿ.ಸಿ.ವಿನುತ,** ಎಂ.ಎ., | ಸಹ ಪ್ರಾಧ್ಯಾಪಕರು | ವಿಭಾಗದ ಮುಖ್ಯಸ್ಥರು |
| **ಪ್ರೊ. ಸಿ.ಎಂ.ಎಸ್.ಲೋಕೇಶ್ವರಯ್ಯ,** ಎಂ.ಎ., | ಸಹ ಪ್ರಾಧ್ಯಾಪಕರು | |
| **ಡಾ. ಜಿ.ಎನ್.ಉಮೇಶ್,** ಎಂ.ಎ.,ಎಂ.ಫಿಲ್.,ಪಿಎಚ್.ಡಿ., | ಸಹ ಪ್ರಾಧ್ಯಾಪಕರು | |

**ಸಂಸ್ಕೃತ ವಿಭಾಗ :**

| | | |
|---|---|---|
| **ಡಾ.ಮೋಹನಭೈರವ,** ಎಂ.ಎ.,ಬಿ.ಇಡಿ.,ಪಿಎಚ್.ಡಿ., | ಉಪನ್ಯಾಸಕರು | ವಿಭಾಗದ ಮುಖ್ಯಸ್ಥರು. |

**ಹಿಂದಿ ವಿಭಾಗ :**

| | | |
|---|---|---|
| **ಡಾ. ಸುಧಾ,** ಎಂ.ಎ.,ಪಿಎಚ್.ಡಿ., | ಉಪನ್ಯಾಸಕರು | ವಿಭಾಗದ ಮುಖ್ಯಸ್ಥರು. |

**ಭೌತಶಾಸ್ತ್ರ ವಿಭಾಗ :**

| | | |
|---|---|---|
| **ಪ್ರೊ. ಬಿ.ಶಶಿಕಲಾ,** ಎಂ.ಎಸ್ಸಿ., | ಸಹ ಪ್ರಾಧ್ಯಾಪಕರು | ವಿಭಾಗದ ಮುಖ್ಯಸ್ಥರು |
| **ಪ್ರೊ. ಹೆಚ್.ಎಂ.ಲಿಂಗರಾಜು,** ಎಂ.ಎಸ್ಸಿ., | ಸಹ ಪ್ರಾಧ್ಯಾಪಕರು | |
| **ಪ್ರೊ. ಜಿ.ಎಸ್.ಮಹಲಿಂಗಯ್ಯ,** ಎಂ.ಎಸ್ಸಿ., | ಸಹ ಪ್ರಾಧ್ಯಾಪಕರು | |
| **ನಳಿನ,** ಎಂ.ಎಸ್ಸಿ., | ಉಪನ್ಯಾಸಕರು | |
| **ನಂದಿನಿ ಹೆಚ್.ಆರ್.,** ಎಂ.ಎಸ್ಸಿ.,ಬಿ.ಇಡಿ., | ಉಪನ್ಯಾಸಕರು | |

**ರಸಾಯನಶಾಸ್ತ್ರ ವಿಭಾಗ :**

| | | |
|---|---|---|
| **ಪ್ರೊ. ಜಿ.ಪಿ.ಸೋಮಶೇಖರಪ್ಪ,** ಎಂ.ಎಸ್ಸಿ., | ಸಹ ಪ್ರಾಧ್ಯಾಪಕರು, | ವಿಭಾಗದ ಮುಖ್ಯಸ್ಥರು |
| **ಪ್ರೊ. ಎಂ.ಬಿ.ಶೈಲಜ,** ಎಂ.ಎಸ್ಸಿ., | ಸಹ ಪ್ರಾಧ್ಯಾಪಕರು | |
| **ಪ್ರೊ. ಎಂ.ಎಸ್. ತಿಪ್ಪೇಶ್,** ಎಂ.ಎಸ್ಸಿ.,ಎಂ.ಫಿಲ್.,ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು | |
| **ಎಂ.ಎಸ್.ಶಿಲ್ಪ,** ಎಂ.ಎಸ್ಸಿ.,ಬಿ.ಇಡಿ., | ಉಪನ್ಯಾಸಕರು | |
| **ಶೋಭಾ ರಾಣಿ,** ಎಂ.ಎಸ್ಸಿ.,[1].ಬಿ.ಇಡಿ., | ಉಪನ್ಯಾಸಕರು | |
| **ವಿ.ಗಾಯತ್ರಿದೇವಿ ,** ಎಂ.ಎಸ್ಸಿ., | ಉಪನ್ಯಾಸಕರು | |

**ಗಣಿತಶಾಸ್ತ್ರ ವಿಭಾಗ :**

| | | |
|---|---|---|
| ಡಾ. ಎನ್.ಜಗದೀಶ್, ಎಂ.ಎಸ್ಸಿ.,ಬಿ.ಇಡಿ.,ಪಿಹೆಚ್.ಡಿ. | ಸಹ ಪ್ರಾಧ್ಯಾಪಕರು | ವಿಭಾಗದ ಮುಖ್ಯಸ್ಥರು |
| ಎಂ.ಹೆಚ್. ಲಾವಣ್ಯ , ಎಂ.ಎಸ್ಸಿ.,ಬಿ.ಇಡಿ., | ಉಪನ್ಯಾಸಕರು | |
| ಬಿ.ಆರ್.ಸೀಮ, ಎಂ.ಎಸ್ಸಿ.,ಬಿ.ಇಡಿ., | ಉಪನ್ಯಾಸಕರು | |
| ವಿ.ಪ್ರಸಿದ್ಧ, ಎಂ.ಎಸ್ಸಿ., | ಉಪನ್ಯಾಸಕರು | |
| ಕೆ.ಎನ್.ಪುಷ್ಪ, ಎಂ.ಎಸ್ಸಿ.,ಬಿ.ಇಡಿ., | ಉಪನ್ಯಾಸಕರು | |

**ಸಸ್ಯಶಾಸ್ತ್ರ ವಿಭಾಗ :**

| | | |
|---|---|---|
| ಪ್ರೊ.ಪ್ರಕಾಶ್, ಎಂ.ಎಸ್ಸಿ.,ಎಂ.ಫಿಲ್., | ಸಹ ಪ್ರಾಧ್ಯಾಪಕರು | ವಿಭಾಗದ ಮುಖ್ಯಸ್ಥರು |
| ಪ್ರೊ. ಬಿ.ಎಂ.ಚಿದಾನಂದಸ್ವಾಮಿ, ಎಂ.ಎಸ್ಸಿ., | ಸಹ ಪ್ರಾಧ್ಯಾಪಕರು | |
| ಪ್ರೊ. ಬಿ.ಎಂ.ಭೈರಪ್ಪ, ಎಂ.ಎಸ್ಸಿ.,ಎಂ.ಫಿಲ್., | ಸಹಾಯಕ ಪ್ರಾಧ್ಯಾಪಕರು | |
| ನಯನ, ಎಂ.ಎಸ್ಸಿ., | ಉಪನ್ಯಾಸಕರು | |

**ಪ್ರಾಣಿಶಾಸ್ತ್ರ ವಿಭಾಗ :**

| | | |
|---|---|---|
| ಪ್ರೊ. ಜಿ.ಸಿ.ಮಲ್ಲಿಕಾರ್ಜುನಸ್ವಾಮಿ, ಎಂ.ಎಸ್ಸಿ.,ಎಂ.ಫಿಲ್.,ಪಿ.ಜಿ.ಡಿ.ಇ.ಇ., | ಸಹ ಪ್ರಾಧ್ಯಾಪಕರು | ವಿಭಾಗದ ಮುಖ್ಯಸ್ಥರು |
| ಪ್ರೊ. ವೈ.ಆರ್.ಸೋಮಶೇಖರಯ್ಯ, ಎಂ.ಎಸ್ಸಿ.,ಎಂ.ಫಿಲ್., | ಸಹಾಯಕ ಪ್ರಾಧ್ಯಾಪಕರು | |
| ಎಲ್.ಎನ್.ಭರತ್‌ಕುಮಾರ್, ಎಂ.ಎಸ್ಸಿ., | ಉಪನ್ಯಾಸಕರು | |
| ಕವಿತ, ಎಂ.ಎಸ್ಸಿ., | ಉಪನ್ಯಾಸಕರು | |

**ವಿದ್ಯುನ್ಮಾನ ವಿಭಾಗ :**

| | | |
|---|---|---|
| ಪ್ರೊ. ವಿನೋದ್ ಫಡ್ಕೆ, ಎಂ.ಎಸ್ಸಿ.,ಎಂ.ಫಿಲ್., | ಸಹ ಪ್ರಾಧ್ಯಾಪಕರು | ವಿಭಾಗದ ಮುಖ್ಯಸ್ಥರು |
| ಡಾ. ಚಿತ್ತರಂಜನ್ ರೈ, ಎಂ.ಎಸ್ಸಿ.,ಪಿಹೆಚ್.ಡಿ., | ಸಹ ಪ್ರಾಧ್ಯಾಪಕರು | |

**ಗಣಕ ವಿಜ್ಞಾನ ವಿಭಾಗ ಮತ್ತು ಬಿ.ಸಿ.ಎ. ವಿಭಾಗ :**

| | | |
|---|---|---|
| ಎಂ.ಎಸ್.ವಿನಯ್, ಬಿ.ಇ., | ಉಪನ್ಯಾಸಕರು | ವಿಭಾಗದ ಮುಖ್ಯಸ್ಥರು |
| ಪಿ.ಎಲ್. ಶಶಿಧರ್ | ಉಪನ್ಯಾಸಕರು | |
| ಮಾನಸ, ಬಿ.ಇ., | ಉಪನ್ಯಾಸಕರು | |
| ಎಸ್.ಮೇಘನ ,ಬಿ.ಇ., | ಉಪನ್ಯಾಸಕರು | |
| ಜಿ.ಎಸ್.ನಯನ, ಎಂ.ಟೆಕ್., | ಉಪನ್ಯಾಸಕರು | |
| ಎಸ್.ಎಸ್.ಅನುಷಾ, ಎಂ.ಟೆಕ್., | ಉಪನ್ಯಾಸಕರು | |
| ಸಪ್ನ ಎಸ್. ಬಸವರಡ್ಡಿ, ಎಂ.ಟೆಕ್., | ಉಪನ್ಯಾಸಕರು | |
| ಹೆಚ್.ಎಸ್.ಕಾವ್ಯ, ಎಂ.ಸಿ.ಎ. | ಉಪನ್ಯಾಸಕರು | |
| ಜಿ.ಜೆ.ಕಾವ್ಯಶ್ರೀ, ಎಂ.ಸಿ.ಎ. | ಉಪನ್ಯಾಸಕರು | |
| ಆರ್.ಸುಪ್ರಿಯ, ಎಂ.ಕಾಂ., | ಉಪನ್ಯಾಸಕರು | |
| ಇ.ಸಿ.ಮಂಜುನಾಥ, ಎಂ.ಟೆಕ್., | ಉಪನ್ಯಾಸಕರು | |
| | ಉಪನ್ಯಾಸಕರು | |

**ಭಾರತೀಯ ಸಂವಿಧಾನ:**

| | |
|---|---|
| ಎಂ.ಜಿ.ರೇಣುಕಸ್ವಾಮಿ, ಎಂ.ಎ., | ರಾಜ್ಯಶಾಸ್ತ್ರ ಉಪನ್ಯಾಸಕರು |

| | | |
|---|---|---|
| ಹಿಕ ಶಿಕ್ಷಣ ವಿಭಾಗ : | ಲಿಖಿತ್, ಎಂ.ಪಿ.ಇಡಿ., | ದೈಹಿಕ ಶಿಕ್ಷಣ ನಿರ್ದೇಶಕರು |
| ಥಾಲಯ ವಿಭಾಗ : | ದೇವರಾಜು, ಎಂ.ಎಲ್.ಐ.ಎಸ್.ಸಿ., ಎನ್.ಇ.ಟಿ. | ಗ್ರಂಥಪಾಲಕರು |
| | ಷಫಿನಾಜ್ ಬಾನು | ಗ್ರಂಥಾಲಯ ಸಹಾಯಕರು |
| | ಜಿ.ಆರ್.ಪದ್ಮ | ಸಹಾಯಕರು |
| | ಎಂ.ಬಿ.ಗೀತಾ | ಸಹಾಯಕರು |
| | ಎಸ್.ಡಿ.ಮನೋಹರ್ | ಸಹಾಯಕರು |
| ಾರ್ಯಾಲಯದ ಬ್ಬಂದಿ ವರ್ಗ : | ಟಿ.ಜಿ.ಲಿಂಗರಾಜು, ಡಿ.ಇ.ಇ., | ಪ್ರಥಮ ದರ್ಜೆ ಸಹಾಯಕರು |
| | ಕೆ.ಆರ್.ಗೋವಿಂದಪ್ಪ | ಸಹಾಯಕರು |
| | ಡಿ.ನಿರಂಜನಮೂರ್ತಿ | ಸಹಾಯಕರು |
| | ಜಿ.ಹೆಚ್. ದೇವರಾಜು | ಸಹಾಯಕರು |
| | ಜಿ.ಎಂ.ತೋಂಟಾರಾಧ್ಯ | ಸಹಾಯಕರು |
| | ಎಂ.ಆರ್. ಶಶಿಕಿರಣ್ | ಸಹಾಯಕರು |
| | ಎನ್.ವೆಂಕಟೇಶ್, ಬಿ.ಎಸ್ಸಿ.,ಹೆಚ್‌ಡಿಐಎಸ್‌ಎಂ. | ಕಂಪ್ಯೂಟರ್‌ಆಪರೇಟರ್ |
| | ಟಿ.ಎಂ.ಸುಜಾತ | ಸಹಾಯಕರು |
| | ವಿಶ್ವನಾಥ್ | ಸಹಾಯಕರು |
| | ಜಿ.ಎಸ್.ಸುಧಾಮಣಿ | ಸಹಾಯಕರು |
| | ಸಿದ್ದರಾಜು | ಸಹಾಯಕರು |
| ್ರಯೋಗಾಲಯದ ಸಹಾಯಕರು : | ಎನ್. ನಾಗರಾಜ | ಲ್ಯಾಬ್ Instructor |
| | ವಿ.ಪ್ರಕಾಶ್ | ಲ್ಯಾಬ್ Instructor |
| | ಎಂ. ಚಂದ್ರಾನಾಯಕ | ಲ್ಯಾಬ್ Instructor |
| | ಶಿವಪ್ಪ | ಲ್ಯಾಬ್ Instructor |
| | ಸಿ.ವಿ. ಕುಮಾರಸ್ವಾಮಿ | ಲ್ಯಾಬ್ Instructor |
| | ಎಂ.ಎಸ್. ಸುಧಾಕರ್ | ಲ್ಯಾಬ್ Instructor |
| | ಎಂ.ಕೆ. ಶಿವಾನಂದ | ಲ್ಯಾಬ್ Instructor |
| | ಎಲ್.ಮೋಹನ್‌ಕುಮಾರ್ | ಲ್ಯಾಬ್ Instructor |
| | ಮಂಗಳಗೌರಿ | ಸಹಾಯಕರು |
| | ಲಕ್ಷ್ಮಿದೇವಮ್ಮ | ಸಹಾಯಕರು |
| | ಪ್ರಭಾವತಿ | ಸಹಾಯಕರು |
| | ರಮೇಶ | ಗಾರ್ಡನರ್ |
| | ಕರಿಯಮ್ಮ | ಸಹಾಯಕರು |
| | ಶಾರದಮ್ಮ | ಸಹಾಯಕರು |
| | ಕೆಂಚಪ್ಪ | ಗಾರ್ಡನರ್ |
| | ಗಂಗಾಧರ | ಗಾರ್ಡನರ್ |
| | ನರಸಯ್ಯ | ಸಹಾಯಕರು |
| | ಬಸವರಾಜು | ಸಹಾಯಕರು |
| ಭದ್ರತಾ ಸಿಬ್ಬಂದಿ : | ಎಂ.ಆರ್.ಕಾಂತರಾಜು | ಪುಟ್ಟರಾಮಯ್ಯ ಹೆಚ್., |
| | ಸೋಮಶೇಖರಯ್ಯ, | ಚಂದ್ರಶೇಖರಯ್ಯ |

# ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು.

[ನ್ಯಾಕ್ ನಿಂದ 'A' ಗ್ರೇಡ್ ಮಾನ್ಯತೆ ಪಡೆದಿದೆ]

## ರಾಷ್ಟ್ರೀಯ ಶಿಕ್ಷಣ ನೀತಿ - 2020 (NEP)
## (B.Sc.,)

| 1<br>ಕಾಲೇಜಿನಲ್ಲಿ ಲಭ್ಯವಿರುವ ಮುಖ್ಯ ವಿಷಯಗಳು<br>[Discipline Core Subjects] | 2<br>ಭಾಷಾ ವಿಷಯಗಳು<br>[Language Subjects] | 3<br>ಮುಕ್ತ ಆಯ್ಕೆ ವಿಷಯಗಳು<br>[Open Elective Subjects] |
|---|---|---|
| 1. ಭೌತಶಾಸ್ತ್ರ | 1. ಕನ್ನಡ | 1. ಭೌತಶಾಸ್ತ್ರ |
| 2. ರಸಾಯನಶಾಸ್ತ್ರ | 2. ಹಿಂದಿ | 2. ರಸಾಯನಶಾಸ್ತ್ರ |
| 3. ಗಣಿತಶಾಸ್ತ್ರ | 3. ಸಂಸ್ಕೃತ | 3. ಗಣಿತಶಾಸ್ತ್ರ |
| 4. ಸಸ್ಯಶಾಸ್ತ್ರ | 4. ಉರ್ದು | 4. ಸಸ್ಯಶಾಸ್ತ್ರ |
| 5. ಪ್ರಾಣಿಶಾಸ್ತ್ರ | 5. ಇಂಗ್ಲಿಷ್ | 5. ಪ್ರಾಣಿಶಾಸ್ತ್ರ |
| 6. ವಿದ್ಯುನ್ಮಾನ | | 6. ವಿದ್ಯುನ್ಮಾನ |
| 7. ಗಣಕ ವಿಜ್ಞಾನ | | 7. ಗಣಕ ವಿಜ್ಞಾನ |
| 8. ಸೂಕ್ಷ್ಮ ಜೀವ ವಿಜ್ಞಾನ | | 8. ಸೂಕ್ಷ್ಮ ಜೀವ ವಿಜ್ಞಾನ |

### ನಿಬಂಧನೆಗಳು :

1. ಲಭ್ಯವಿರುವ ಮುಖ್ಯ ವಿಷಯ[Discipline Core Subjects]ಗಳಲ್ಲಿ ಯಾವುದಾದರೂ 2 ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಮತ್ತು ಈ 2 ವಿಷಯಗಳನ್ನು 3 ವರ್ಷ ಅಂದರೆ 6 ಸೆಮಿಸ್ಟರ್ ಕಡ್ಡಾಯವಾಗಿ ಅಧ್ಯಯನ ಮಾಡಬೇಕು.

2. ಯಾವುದಾದರೂ 2 ಭಾಷಾ ವಿಷಯಗಳನ್ನು ಕಡ್ಡಾಯವಾಗಿ ಅಧ್ಯಯನ ಮಾಡಬೇಕು.

3. ಮುಕ್ತ ಆಯ್ಕೆ ವಿಷಯ [Open Elective Subjects]ಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದು. [ಆದರೆ ಮುಖ್ಯ ವಿಷಯವಾಗಿ ಆಯ್ಕೆ ಮಾಡಿರುವ 2 ವಿಷಯಗಳನ್ನು ಹೊರತುಪಡಿಸಿ] ಮತ್ತು ಮುಕ್ತ ಆಯ್ಕೆ ವಿಷಯ [Open Elective Subjects] 4 ಸೆಮಿಸ್ಟರ್‌ವರೆಗೆ ಮಾತ್ರ ಇರುತ್ತದೆ. ಹಾಗೂ ಪ್ರತಿ ಸೆಮಿಸ್ಟರ್‌ನಲ್ಲಿ ಮುಕ್ತ ಆಯ್ಕೆ ವಿಷಯವನ್ನು ಬದಲಾಯಿಸಿಕೊಳ್ಳುವ ಅವಕಾಶವಿದೆ.

# BCA - ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್

## Bachelor of Computer Application

**BCA ಪದವಿಯೂ ಸಹ ಮೂರು ವರ್ಷಗಳ ಅವಧಿಯದಾಗಿದ್ದು, (ಅರು ಸೆಮಿಸ್ಟರ್) ಪ್ರೀ-ಯೂನಿವರ್ಸಿಟಿ ಶಿಕ್ಷಣ ಮಂಡಳಿ ಅಥವಾ ಅದಕ್ಕೆ ಸರಿಸಮನಾದ ಯಾವುದೇ ಶಿಕ್ಷಣ ಮಂಡಳಿ ನಡೆಸಿದ ವಿಜ್ಞಾನ ಅಥವಾ ವಾಣಿಜ್ಯ ವಿಷಯಗಳನ್ನು ಅಭ್ಯಾಸ ಮಾಡಿ ತೇರ್ಗಡೆಯಾದ ಅಥವಾ 2 ವರ್ಷದ ITI ಅಥವಾ 3 ವರ್ಷದ ಡಿಪ್ಲೊಮಾ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಅವಕಾಶವಿದೆ.**

### ಎರಡನೆಯ ಮತ್ತು ಮೂರನೆಯ ಸ್ನಾತಕ ಪದವಿಯಲ್ಲಿ (B.Sc. - B.C.A.) ಶಿಕ್ಷಣ ಮುಂದುವರಿಸಲು ಅಗತ್ಯವಾದ ನಿಯಮಾವಳಿಗಳು :

1. ಮೊದಲನೆಯ ವರ್ಷದ ಅವಧಿಯಲ್ಲಿ ನಿಗದಿಪಡಿಸಿದ ಹಾಜರಾತಿಯುಳ್ಳ ಮತ್ತು ಆ ವರ್ಷದ ಪಬ್ಲಿಕ್ ಪರೀಕ್ಷೆಗೆ ಶುಲ್ಕ ಸಮೇತ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಮಾತ್ರ ಎರಡನೆಯ ವರ್ಷದ ಮೂರನೇ ಸೆಮಿಸ್ಟರ್ ಸ್ನಾತಕ ಶಿಕ್ಷಣಕ್ಕೆ ಪ್ರವೇಶಿಸಲು ಅರ್ಹರು.
2. ಎರಡನೆಯ ವರ್ಷದ ಅವಧಿಯಲ್ಲಿ ನಿಗದಿಪಡಿಸಿದ ಹಾಜರಾತಿಯುಳ್ಳ ಮತ್ತು ಆ ವರ್ಷದ ಪಬ್ಲಿಕ್ ಪರೀಕ್ಷೆಗೆ ಶುಲ್ಕ ಸಮೇತ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಮೂರನೆಯ ವರ್ಷದ 5ನೇ ಸೆಮಿಸ್ಟರ್ ತರಗತಿಗೆ ಪ್ರವೇಶಿಸಲು ಅರ್ಹರು.
3. ಒಟ್ಟಾರೆ ಮೂರು ವರ್ಷಗಳ ಅವಧಿಯಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಪೂರ್ಣವಾಗಿ ಎಲ್ಲ ವಿಷಯಗಳಲ್ಲೂ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಮಾತ್ರ ಪದವಿ ಪಡೆಯಲು ಅರ್ಹರಾಗಿರುತ್ತಾರೆ.
4. ಪರೀಕ್ಷಾ ಶುಲ್ಕ ಪಾವತಿ ಮಾಡಿದಾಕ್ಷಣ ಪರೀಕ್ಷೆ ಬರೆಯುವ ಹಕ್ಕಿರುವುದಿಲ್ಲ.
   ಎಲ್ಲಾ ವಿಷಯಗಳಲ್ಲಿ ನಿಗದಿಪಡಿಸಿದ ಹಾಜರಾತಿ ಇರಬೇಕು.

### ನಿಯಮಾವಳಿಗಳು :

1. ತರಗತಿಗೆ ತಡವಾಗಿ ಬರಕೂಡದು, ತರಗತಿಯಿಂದ ಹೊರಗೆ ಹೋಗಬಯಸುವವರು ಅಧ್ಯಾಪಕರ ಅನುಮತಿಯಿಲ್ಲದೆ ಹೋಗುವಂತಿಲ್ಲ.
2. ಪ್ರತಿ ವಿಷಯದಲ್ಲೂ ಶೇಕಡ 75 ರಷ್ಟು ಹಾಜರಾತಿ ಕಡ್ಡಾಯವಾಗಿ ಇರಬೇಕು.ಇಲ್ಲವಾದಲ್ಲಿ ಸೆಮಿಸ್ಟರ್ ಪರೀಕ್ಷೆಗೆ ಅನುಮತಿ ನೀಡಲಾಗುವುದಿಲ್ಲ.
3. ಹಾಜರಾತಿ ಶೇಕಡ 75 ಕ್ಕಿಂತ ಕಡಿಮೆ ಇರುವವರು ಯಾವೊಂದು ವಿದ್ಯಾರ್ಥಿ ವೇತನಕ್ಕಾಗಲೀ, ವಿದ್ಯಾರ್ಥಿನಿಲಯದ ಸೌಲಭ್ಯಕ್ಕಾಗಲಿ, ಫೀ ವಿನಾಯಿತಿಗಾಗಲಿ ಅರ್ಹರಲ್ಲ.
4. ಕಾಲೇಜಿನ ಆವರಣದಲ್ಲಿ ಪ್ಲಾಸ್ಟಿಕ್ ಬಳಸಬಾರದು.
5. ತರಗತಿಗಳಲ್ಲಿ ಮೊಬೈಲ್‌ಗಳ ಬಳಕೆ ಕಡ್ಡಾಯವಾಗಿ ನಿಷೇಧಿಸಿದೆ.

## ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಶಿಸ್ತಿನ ಸಂಬಂಧವಾದ ನಿಯಮಗಳು :

**ಪ್ರತಿಯೊಬ್ಬ ವಿದ್ಯಾರ್ಥಿ/ನಿಯು ಕಾಲೇಜಿನ ಗುರುತು ಪತ್ರವನ್ನು ಕಾಲೇಜು ಆವರಣವನ್ನು ಪ್ರವೇಶಿಸುವಾಗ ಕಡ್ಡಾಯವಾಗಿ ಹೊಂದಿರಬೇಕು ಮತ್ತು ಕಾಲೇಜಿನ ಅಧಿಕಾರಿವರ್ಗದವರು ಕೇಳಿದಾಗ ಹಾಜರುಪಡಿಸತಕ್ಕದ್ದು.**

**ನಿಗದಿಪಡಿಸಿದ ಸಮವಸ್ತ್ರವನ್ನು ಕಡ್ಡಾಯವಾಗಿ ಧರಿಸಿ ಕಾಲೇಜಿಗೆ ಬರತಕ್ಕದ್ದು.**

ಉಪನ್ಯಾಸಕರು ಉಪನ್ಯಾಸ ಕೊಠಡಿಯನ್ನು ಪ್ರವೇಶಿಸುವ ಮುನ್ನ ವಿದ್ಯಾರ್ಥಿಗಳು ತರಗತಿಗಳಲ್ಲಿ ಉಪಸ್ಥಿತರಿದ್ದು ಉಪನ್ಯಾಸಕರ ಅನುಮತಿಯಿಲ್ಲದೆ ತರಗತಿಯ ವೇಳೆಯಲ್ಲಿ ಹೊರಗೆ ಹೋಗಬಾರದು. ತರಗತಿಗಳಿಗೆ ಗೈರು ಹಾಜರಾಗುವ ಮತ್ತು ಅಶಿಸ್ತಿನಿಂದ ವರ್ತಿಸುವ ವಿದ್ಯಾರ್ಥಿಗಳನ್ನು ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.

ವಿದ್ಯಾರ್ಥಿಗಳು ಕಾಲೇಜಿನ ಪೀಠೋಪಕರಣಗಳನ್ನು ವಿರೂಪಗೊಳಿಸುವುದಾಗಲೀ, ಗೋಡೆಗಳ ಮೇಲೆ ಬರೆಯುವುದಾಗಲೀ ಮಾಡಿದಲ್ಲಿ ದಂಡ ವಿಧಿಸಲಾಗುವುದು.

ವಿದ್ಯಾರ್ಥಿಗಳು ಸಭ್ಯತೆಯಿಂದ ವರ್ತಿಸುವುದಲ್ಲದೆ ವಿದ್ಯಾಲಯದ ಪರಿಸರ ಹಾಗೂ ಶೌಚಾಲಯವನ್ನು ಸ್ವಚ್ಛವಾಗಿಡಲು ಸಹಕರಿಸತಕ್ಕದ್ದು.

ವಿದ್ಯಾರ್ಥಿಗಳು ಯಾವುದೇ ರೀತಿಯ ಅಹಿತಕರ ಚಟುವಟಿಕೆಗಳಲ್ಲಿ ಭಾಗವಹಿಸದೆ ತಮ್ಮ ಪೂರ್ಣ ಗಮನವನ್ನು ವ್ಯಾಸಂಗದ ಕಡೆಗೆ ಹರಿಸತಕ್ಕದ್ದು.

ಕಾಲೇಜಿನ ಶಿಸ್ತುಪಾಲನೆಯ ಜವಾಬ್ದಾರಿ ಎಲ್ಲರ ಹೊಣೆಗಾರಿಕೆಯಾಗಿದ್ದು, ಎಲ್ಲ ವಿದ್ಯಾರ್ಥಿಗಳು ಕಾಲೇಜು ನಿಗದಿಪಡಿಸಿದ ನಿಯಮ-ನಿಬಂಧನೆಗಳಿಗೆ ಒಳಪಟ್ಟಿರಬೇಕು.

ವಿದ್ಯಾರ್ಥಿಗಳು ಶಿಸ್ತು ಹಾಗೂ ಶ್ರದ್ಧೆಯಿಂದ ಅಧ್ಯಯನ ಮಾಡಿದಲ್ಲಿ ಅಂತಹ ವಿದ್ಯಾರ್ಥಿ ಮುಂದಿನ ವರ್ಷಕ್ಕೆ ತೇರ್ಗ ಹೊಂದಿ ಭವಿಷ್ಯದಲ್ಲಿ ಯಶಸ್ಸನ್ನು ಗಳಿಸಲು ನೆರವಾಗುತ್ತದೆ. ಇಲ್ಲದಿದ್ದಲ್ಲಿ ವಿದ್ಯಾರ್ಥಿಗೆ ಪ್ರವೇಶವನ್ನು ನಿರಾಕರಿಸುವ ಹಕ್ಕು ಆಡಳಿತಾಧಿಕಾರಿಗಳಿಗಿರುತ್ತದೆ.

7. ವಿದ್ಯಾರ್ಥಿಗಳು ಕಿರುಪರೀಕ್ಷೆ ಮತ್ತು ಸೆಮಿಸ್ಟರ್ ಪರೀಕ್ಷೆಗಳಿಗೆ ತಪ್ಪದೆ ಹಾಜರಾಗಬೇಕು.
8. ವಿದ್ಯಾರ್ಥಿಗಳು ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಸಾಂಸ್ಕೃತಿಕ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನಗಳನ್ನು ನೀಡಲಾಗುತ್ತದೆ.
9. ವಿದ್ಯಾರ್ಥಿಗಳಿಗೆ ಕಾಲೇಜಿನ ಹಾಗೂ ಹೆತ್ತವರ ಗೌರವ ಮತ್ತು ಹೆಸರನ್ನು ಉಳಿಸುವ ಜವಾಬ್ದಾರಿಯಿದೆ.
10. ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳ ನಿವಾರಣೆಗೆ ಪ್ರಾಂಶುಪಾಲರು, ವಿದ್ಯಾರ್ಥಿ ಕ್ಷೇಮಾಧಿಕಾರಿ / ತರಗತಿ ಅಧ್ಯಾಪಕ ನೆರವಿನೊಂದಿಗೆ ಆಪ್ತ ಸಲಹಾ ಕೇಂದ್ರದ ನೆರವು ಮತ್ತು ಮಾರ್ಗದರ್ಶನ ಪಡೆಯತಕ್ಕದ್ದು.

**ಲೇಜಿನ ಗ್ರಂಥಾಲಯ ಗಣಕೀಕರಣಗೊಂಡಿದೆ :**

ಗ್ರಂಥಾಲಯದಲ್ಲಿ ಮೌಲಿಕವಾದ ಸುಮಾರು 31127 ಗ್ರಂಥಗಳಿದ್ದು ಇವು ಪದವಿ ವಿದ್ಯಾರ್ಥಿಗಳಿಗೆ ಅಗತ್ಯವಾದ ಹಾಗೂ ಪರಾಮರ್ಶನ ಪುಸ್ತಕಗಳನ್ನು ಒಳಗೊಂಡಿದೆ. ವಿಶ್ವ ವಿದ್ಯಾಲಯ ಧನ ಸಹಾಯ ಆಯೋಗದ ನೆರವಿನಿಂದ **ಂದು ಪಠ್ಯ ಪುಸ್ತಕ ಗ್ರಂಥಾಲಯವನ್ನು'** ಸಹ ಸ್ಥಾಪಿಸಲಾಗಿದೆ. ಕಾಲೇಜು ನಡೆಯುವ ದಿನಗಳಲ್ಲಿ ಪ್ರತಿನಿತ್ಯ ಬೆಳಿಗ್ಗೆ 10 ರಿಂದ ೆ 5-30 ರವರೆಗೆ ವಾಚನಾಲಯದಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಾದ ದೈನಿಕ, ಪಾಕ್ಷಿಕ, ಮಾಸಿಕ, ತ್ರೈಮಾಸಿಕ, ತಾಂತ್ರಿಕ, ಜ್ಞಾನಿಕ ಮತ್ತು ಸಾಹಿತ್ಯಕ ಪತ್ರಿಕೆಗಳನ್ನು ಒದಗಿಸಲಾಗುವುದು. ಮತ್ತು ಅಂತರ್ಜಾಲದ ವ್ಯವಸ್ಥೆ ಸಹ ಇರುತ್ತದೆ. ವಿದ್ಯಾರ್ಥಿಗಳಿಗೆ ದ ಪುಸ್ತಕ (Open Access) ವ್ಯವಸ್ಥೆಯಿದೆ.

**ನಿಯಮಗಳು :**

ಪ್ರತಿಯೊಬ್ಬ ವಿದ್ಯಾರ್ಥಿಗೂ ಗ್ರಂಥಾಲಯದ ಗುರುತು ಪತ್ರವನ್ನು ವರ್ಷದ ಪ್ರಾರಂಭದಲ್ಲಿ ಕೊಡಲಾಗುವುದು. ವಿದ್ಯಾರ್ಥಿಗಳು ಗ್ರಂಥಾಲಯದ ಈ ಗುರುತು ಪತ್ರವನ್ನು ಯಾವ ಕಾರಣದಿಂದಲೂ ವರ್ಗಾವಣೆ ಮಾಡಬಾರದು. ಪ್ರತಿ ಅಧ್ಯಯನ ವರ್ಷ ಮುಗಿದ ತಕ್ಷಣ ವಿದ್ಯಾರ್ಥಿ ಗ್ರಂಥಪಾಲಕರಿಗೆ ಈ ಪತ್ರವನ್ನು ಹಿಂತಿರುಗಿಸಿ ಯಾವುದೇ ಬಾಕಿ ಇಲ್ಲ (No Due) ಎಂಬ ಅರ್ಹತಾ ಪತ್ರವನ್ನು ಪಡೆಯತಕ್ಕದ್ದು.

ಗ್ರಂಥಾಲಯವನ್ನು ಪ್ರವೇಶ ಮಾಡುವಾಗ ಸಿಬ್ಬಂದಿಗೆ ತನ್ನ ಗುರುತಿನ ಪತ್ರವನ್ನು ತೋರಿಸಬೇಕು.

ಪ್ರಕಟಿತ ವೇಳಾಪಟ್ಟಿಯಂತೆ ವಿದ್ಯಾರ್ಥಿಗಳಿಗೆ ನಿಯಮಿತ ದಿನಗಳಲ್ಲಿ ಮಾತ್ರ ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಕೊಡಲಾಗುವುದು.

ನಿಗದಿಪಡಿಸಿದ ಕಾಲಾವಧಿಯ ನಂತರ ಹಿಂತಿರುಗಿಸುವ ಪ್ರತಿ ಪುಸ್ತಕಕ್ಕೆ ದಿನ ಒಂದಕ್ಕೆ ಗ್ರಂಥಾಲಯ ಸಮಿತಿವಿಧಿಸುವ ದಂಡ ವಸೂಲಿ ಮಾಡಲಾಗುವುದು.

ಗ್ರಂಥಪಾಲಕರು ವಿದ್ಯಾರ್ಥಿಗಳಿಗೆ ಎರವಲು ನೀಡಿರುವ ಪುಸ್ತಕಗಳನ್ನು ಅಗತ್ಯವಿದ್ದಲ್ಲಿ ಯಾವುದೇ ಸಮಯದಲ್ಲಿ ನಿಯಮಿತ ಕಾಲಕ್ಕೆ ಮೊದಲೇ ಹಿಂತಿರುಗಿಸುವಂತೆ ಆದೇಶ ನೀಡಬಹುದು.

ಗ್ರಂಥಾಲಯದ ಗುರುತು ಪತ್ರವನ್ನು ಕಳೆದುಕೊಂಡ ಪಕ್ಷದಲ್ಲಿ 25-00 ರೂ. ದಂಡವನ್ನು ಕಛೇರಿಯಲ್ಲಿ ಪಾವತಿ ಮಾಡಿ ರಶೀತಿಯನ್ನು ಪಡೆದು ಗ್ರಂಥಾಲಯದಲ್ಲಿ ನಕಲು ಪತ್ರವನ್ನು ಪಡೆಯಬಹುದು.

ಗ್ರಂಥಾಲಯದಿಂದ ಪುಸ್ತಕ ಎರವಲು ಪಡೆಯುವಾಗ ಅದರ ಪುಟಗಳನ್ನು ಪರೀಕ್ಷಿಸಿಕೊಳ್ಳಬೇಕು. ಪುಸ್ತಕ ದೋಷಯುಕ್ತ ವಾಗಿದ್ದರೆ ವಿದ್ಯಾರ್ಥಿಯು ಗ್ರಂಥಪಾಲಕರ ಗಮನಕ್ಕೆ ತಕ್ಷಣ ತರತಕ್ಕದ್ದು. ಹಾಗಿಲ್ಲದ ಪಕ್ಷದಲ್ಲಿ ಹಾಳಾಗಿರುವ ಪುಸ್ತಕಕ್ಕೆ ಬದಲಾಗಿ ಹೊಸ ಪುಸ್ತಕವನ್ನಾಗಲೀ, ದಂಡವನ್ನಾಗಲಿ ಕೊಡಬೇಕು.

ವಿದ್ಯಾರ್ಥಿ ಗ್ರಂಥಾಲಯವನ್ನು ಪ್ರವೇಶಿಸುವ ಮುನ್ನ ತನ್ನ ಪುಸ್ತಕ ಹಾಗೂ ಇತರೆ ವಸ್ತುಗಳನ್ನು ಕೌಂಟರ್‌ನಲ್ಲಿರುವ ಸಿಬ್ಬಂದಿ ವಶಕ್ಕೆ ಒಪ್ಪಿಸತಕ್ಕದ್ದು.

. ಗ್ರಂಥಾಲಯ ಸಿಬ್ಬಂದಿಯು ವಿದ್ಯಾರ್ಥಿಯ ಪುಸ್ತಕಗಳನ್ನು ಅವಶ್ಯವೆನಿಸಿದರೆ ತನಿಖೆ ಮಾಡಬಹುದು.

0. ಪರಾಮರ್ಶನ ಗ್ರಂಥ (Reference books) ಗಳನ್ನು ಮನೆಗೆ ಕೊಡಲಾಗುವುದಿಲ್ಲ.

11. ಗ್ರಂಥಾಲಯದಿಂದ ಎರವಲು ಪಡೆದ ಪುಸ್ತಕಗಳನ್ನು ಒಂದು ವಾರದವರೆಗೆ ಇಟ್ಟುಕೊಳ್ಳಲು ಅವಕಾಶವಿದ್ದು, ಇಚ್ಛೆಪಟ್ಟಲ್ಲಿ ಮುನ್ನವೇ ಪುಸ್ತಕಗಳನ್ನು ಹಿಂತಿರುಗಿಸಿ ಬದಲಿ ಪುಸ್ತಕಗಳನ್ನು ಪಡೆಯಬಹುದು. ಪುಸ್ತಕ ಹಿಂತಿರುಗಿಸಬೇಕಾದ ದಿನ ರಜಾ ಪಕ್ಷದಲ್ಲಿ ಮಾರನೆಯ ದಿನ ಹಿಂತಿರುಗಿಸಬಹುದು. ಗ್ರಂಥಾಲಯದ ಪುಸ್ತಕವನ್ನು ಕಳೆದ ಪಕ್ಷದಲ್ಲಿ ಕಾಲೇಜು ನಿರ್ಧರಿ ದಂಡ ವಸೂಲು ಮಾಡಲಾಗುವುದು.

12. ವಿದ್ಯಾರ್ಥಿಯು ಬೇರೆ ಕಾಲೇಜಿಗೆ ವರ್ಗಾವಣೆ ಪಡೆಯುವಾಗ ಗ್ರಂಥಾಲಯದ ಗುರುತು ಪತ್ರವನ್ನು ಗ್ರಂಥಪಾಲಕರಿಗೆ ಕಡ್ಡಾ ವಾಗಿ ಹಿಂತಿರುಗಿಸಬೇಕು. ತಪ್ಪಿದಲ್ಲಿ ಯಾವುದೇ ಬಾಕಿ ಇಲ್ಲ ಎಂಬ ಪ್ರಮಾಣ ಪತ್ರವನ್ನು ನೀಡಲಾಗುವುದಿಲ್ಲ.

13. ಗ್ರಂಥಾಲಯದಲ್ಲಿ ವಿದ್ಯಾರ್ಥಿಯು ಶಿಸ್ತಿನಿಂದ ವರ್ತಿಸಬೇಕು. ಅನವಶ್ಯಕ ಮಾತುಗಳನ್ನು ಗ್ರಂಥ ಭಂಡಾರದ ಪರಿಸ ನಿಷೇಧಿಸಲಾಗಿದೆ.

**TCS (ಟಿ.ಸಿ.ಎಸ್.) ಕಂಪನಿಯಿಂದ ಉಚಿತ ತರಬೇತಿ :**

**ಪ್ರಖ್ಯಾತ ಟಿ.ಸಿ.ಎಸ್. ಕಂಪನಿಯು ನಮ್ಮ ಕಾಲೇಜಿಗೆ ಬಂದು ಆಯ್ದ ವಿದ್ಯಾರ್ಥಿಗಳಿಗೆ ಉದ್ಯೋಗ / ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶೇಷ ತರಬೇತಿಯನ್ನು ಉಚಿತವಾಗಿ ನೀಡುತ್ತಿದೆ. ಇದು ೨೦ ಗಂಟೆಗಳ ಅವಧಿಯಾಗಿದ್ದು, ತರಗತಿಗಳು ವಾರಾಂತ್ಯದಲ್ಲಿ ನಡೆಯುತ್ತವೆ.**

**ಗುರುತಿನ ಪತ್ರ**

ಕಾಲೇಜಿನ ಪ್ರತಿಯೊಬ್ಬ ವಿದ್ಯಾರ್ಥಿಗೂ ದೃಢೀಕರಿಸಿದ ಭಾವಚಿತ್ರವಿರುವ ಗುರುತಿನ ಪತ್ರವನ್ನು ಕೊಡಲಾಗುವು ಗುರುತಿನ ಪತ್ರ ಕಳೆದುಕೊಂಡ ಪಕ್ಷದಲ್ಲಿ **25-00** ರೂ. ಶುಲ್ಕ ನೀಡಿ ಕಛೇರಿಯಿಂದ ನಕಲು **ಗುರುತಿನ ಪತ್ರ** ಬಹುದು. ಈ ಪತ್ರವನ್ನು ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಸದಾ ತಮ್ಮೊಡನೆ ಇಟ್ಟುಕೊಂಡಿದ್ದು ಅಗತ್ಯ ಸಂದರ್ಭದಲ್ಲಿ ಹಾಜರುಪಡಿಸಬೇಕು.

**ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಯೋಜನೆ :** ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ವಿದ್ಯಾರ್ಥಿಯು ತನ್ನ ಹೊಂದಿಕೊಂಡು ವೈಯಕ್ತಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ತನ್ನ ಸ್ಥಾನವನ್ನು ಗುರುತಿಸಿಕೊಳ್ಳುವುದು. ವಿದ್ಯಾ ಸರ್ವತೋಮುಖ ವಾದ ಪ್ರಗತಿಗೆ ಈ ಯೋಜನೆ ಮಾರ್ಗದರ್ಶನ ಮತ್ತು ನೆರವನ್ನು ನೀಡುತ್ತದೆ.

**ದೈಹಿಕ ಶಿಕ್ಷಣ ವಿಭಾಗ**

ನಮ್ಮ ಕಾಲೇಜಿನಲ್ಲಿ ಅನುಭವಿ ದೈಹಿಕ ಶಿಕ್ಷಣ ನಿರ್ದೇಶಕರಿದ್ದು ಸುಸಜ್ಜಿತ ಆಡಿಟೋರಿಯಂ ಮತ್ತು ಹೊರ ಕ್ರೀಡಾಂಗ ಈ ಸೌಲಭ್ಯದಿಂದ ವಿಶ್ವವಿದ್ಯಾಲಯ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವುದರೊಂದಿ ಮನೋಭಾವನೆಗಳನ್ನು ಬೆಳೆಸಿಕೊಳ್ಳಲು ಉತ್ತಮ ಅವಕಾಶವಿದೆ ಹಾಗೂ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗಾ "ಮಲ್ಟಿ ಜಿಮ್" (Multi Gym) ಸೌಲಭ್ಯವಿದೆ.

## ಎನ್.ಸಿ.ಸಿ. (N.C.C.)

ನಮ್ಮ ಕಾಲೇಜಿನಲ್ಲಿ ಎನ್.ಸಿ.ಸಿ. ಘಟಕವಿದ್ದು ವಿದ್ಯಾರ್ಥಿಗಳಲ್ಲಿ ಶಿಸ್ತು, ರಾಷ್ಟ್ರ ಪ್ರೇಮ ಮತ್ತು ಸಮಾಜ ಸೇವೆ ಮುಂತಾದ ಭಾವನೆಗಳನ್ನು ಬೆಳೆಸುವುದರಲ್ಲಿ ಅನುವು ಮಾಡಿಕೊಡುವುದು. ಎನ್.ಸಿ.ಸಿ. ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಆದ್ಯತೆ ಸಿಗುವ ಸಾಧ್ಯತೆಗಳಿವೆ. ಕಾಲೇಜಿನಲ್ಲಿ ಎನ್.ಸಿ.ಸಿ. ಮಹಿಳಾ ಘಟಕವು ಪ್ರಾರಂಭವಾಗಿದೆ.

## ರಾಷ್ಟ್ರೀಯ ಸೇವಾ ಯೋಜನೆ (N.S.S.)

ನಮ್ಮ ಕಾಲೇಜಿನಲ್ಲಿ ಮೂರು ಎನ್.ಎಸ್.ಎಸ್. ಘಟಕಗಳಿದ್ದು ವಿದ್ಯಾರ್ಥಿಗಳಲ್ಲಿ ಶಿಸ್ತು, ಸಾಮಾಜಿಕ ಕರ್ತವ್ಯ, ದೇಶಾಭಿಮಾನ, ಶ್ರಮದಾನದ ಮಹತ್ವ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವಲ್ಲಿ ರಾಷ್ಟ್ರೀಯ ಸೇವಾ ಯೋಜನೆಯು ಸಹಕಾರಿಯಾಗುವುದು.

**ಯುವ ರೆಡ್ ಕ್ರಾಸ್ ಘಟಕ ಹಾಗೂ ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ರೋವರ್ ಅಂಡ್ ರೇಂಜರ್ ಘಟಕವನ್ನು 2012-13 ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.**

**ಅಪಘಾತ ವಿಮೆ :** ವೈಯಕ್ತಿಕ ಅಪಘಾತ ವಿಮೆ ಸೌಲಭ್ಯವಿದೆ. (Group Personal Health Insurance)

**ಶುಲ್ಕ ನೀಡಿಕೆ :** ವಿದ್ಯಾರ್ಥಿ ಕಾಲೇಜು ಸೇರುವಾಗ ನಿಗದಿಪಡಿಸಿದ ಮೊತ್ತವನ್ನು ಪಾವತಿಸಬೇಕು.

## ಸಹಕಾರ ಸಂಘ

ಕಲ್ಪತರು ಕಾಲೇಜು ಸಹಕಾರ ಸಂಘ ಕಾಲೇಜಿಗೆ ಹೊಂದಿಕೊಂಡಿದ್ದು, ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಅಗತ್ಯವಾದ ವಸ್ತುಗಳನ್ನು ಸುಲಭ ಬೆಲೆಯಲ್ಲಿ ಒದಗಿಸಿ ಸಹಕಾರ ಪ್ರಜ್ಞೆಯನ್ನು ಬೆಳೆಸುತ್ತಿದೆ. ಕಿರು ಪರೀಕ್ಷೆಯನ್ನು ಬರೆಯಲು ಉತ್ತರ ಪುಸ್ತಕಗಳನ್ನು ಸಹಕಾರ ಸಂಘದಲ್ಲಿಯೇ ಖರೀದಿಸತಕ್ಕದ್ದು.

## ವಿದ್ಯಾರ್ಥಿ ನಿಲಯಗಳು

ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ನಿಲಯಗಳಿವೆ. ಆಧುನಿಕ ರೀತಿಯ ಸುಸಜ್ಜಿತ ಅಡುಗೆ ಮನೆ, ಊಟದ ಮನೆ, ವ್ಯಾಯಾಮ ಶಾಲೆ, ವಾಚನಾಲಯ ವ್ಯವಸ್ಥೆಯಿರುತ್ತದೆ.

**ಇತರೆ ವಿದ್ಯಾರ್ಥಿ ನಿಲಯಗಳು:** ತಿಪಟೂರು ನಗರದಲ್ಲಿ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಅನೇಕ ವಿದ್ಯಾರ್ಥಿನಿಲಯಗಳಿದ್ದು ಊಟ, ವಸತಿಗಳನ್ನು ಅತಿ ಕಡಿಮೆ ವೆಚ್ಚದಲ್ಲಿ ಒದಗಿಸಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ನೆರವು ನೀಡಲು ಶ್ರಮಿಸುತ್ತಿವೆ. ಈ ವಿದ್ಯಾರ್ಥಿ ನಿಲಯಗಳೆಂದರೆ :

1) ಜಯದೇವ ವಿದ್ಯಾರ್ಥಿ ನಿಲಯ
2) ಗುರುಕುಲ ವಿದ್ಯಾರ್ಥಿ ನಿಲಯ
3) ಬ್ರಾಹ್ಮಣ ವಿದ್ಯಾರ್ಥಿ ನಿಲಯ
4) ವೈಶ್ಯ ವಿದ್ಯಾರ್ಥಿ ನಿಲಯ
5) ಒಕ್ಕಲಿಗರ ವಿದ್ಯಾರ್ಥಿ ನಿಲಯ
6) ಸರ್ವೋದಯ ವಿದ್ಯಾರ್ಥಿ ನಿಲಯ
7) ಗಾಣಿಗರ ವಿದ್ಯಾರ್ಥಿ ನಿಲಯ
8) ಕರ್ನಾಟಕ ಸರ್ಕಾರ ನಡೆಸುವ ಸಾರ್ವಜನಿಕ ವಿದ್ಯಾರ್ಥಿ ನಿಲಯ ಮೊದಲಾದವುಗಳು.

## ಅರ್ಹತಾ ಪತ್ರಗಳು

ಅರ್ಹತಾ ಪತ್ರಗಳನ್ನು (ವಯಸ್ಸು, ನಡತೆ ಮೊದಲಾದವು) ಪಡೆಯಲು ಇಚ್ಛಿಸುವವರು ಪ್ರಾಚಾರ್ಯರಿಗೆ ಸಲ್ಲಿಸಬೇಕು. ಅಂಚೆ ಮುಖಾಂತರ ತರಿಸಿಕೊಳ್ಳಲು ಇಚ್ಛಿಸುವವರು ಸ್ವಂತ ವಿಳಾಸವುಳ್ಳ ಮತ್ತು ಸಾಕಷ್ಟು ಅಂಚೆ ಚೀಟಿ ಲಕೋಟೆಯೊಂದನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

## ಅರ್ಜಿ ವಿವರ ಕೆಳಕಂಡಂತೆ ಇರಬೇಕು

ವಿದ್ಯಾರ್ಥಿಯ ಪೂರ್ಣ ಹೆಸರು, ಕಾಲೇಜನ್ನು ಸೇರಿದ ದಿನಾಂಕ, ಸೇರಿದ ವರ್ಷ ಮತ್ತು ಯಾವ ತರಗತಿ ಓದುತ್ತಿದ್ದೇನೆಂಬ ಮಾಹಿತಿ ಇರಬೇಕು.

**ಅರ್ಹತಾ ಪತ್ರಗಳನ್ನು ನೀಡಲು ಶುಲ್ಕವನ್ನು ಕೆಳಕಂಡಂತೆ ವಿಧಿಸಲಾಗುವುದು.**

| | |
|---|---|
| 1) ಹುಟ್ಟಿದ ತಾರೀಖಿನ ಪ್ರಮಾಣ ಪತ್ರ | ರೂ. 30-00 |
| 2) ಬಾಕಿ ಇಲ್ಲ ಪ್ರಮಾಣ ಪತ್ರ | ರೂ. 30-00 |
| 3) ಮಾಜಿ ವಿದ್ಯಾರ್ಥಿ ಎಂದು ಗುರುತಿಸುವ ಪ್ರಮಾಣ ಪತ್ರ | ರೂ. 30-00 |
| 4) ಇತರೆ ಯಾವುದೇ ಅರ್ಹತಾ ಪತ್ರಕ್ಕೆ | ರೂ. 30-00 |
| 5) ವರ್ಗಾವಣೆ ಪತ್ರ (T. C.) | ರೂ. 75-00 |
| 6) ವಿದ್ಯಾಭ್ಯಾಸ ಪ್ರಮಾಣ ಪತ್ರ | ರೂ. 30-00 |

ವರ್ಗಾವಣೆ ಪತ್ರವನ್ನು ವಿದ್ಯಾರ್ಥಿಗಳ ಕೈಗೆ ಕೊಡಲಾಗುವುದಿಲ್ಲ. ವಿದ್ಯಾರ್ಥಿ ಪ್ರವೇಶ ಪಡೆದ ಕಾಲೇಜಿಗೆ ನೇರವಾಗಿ ಕಳುಹಿಸಲಾಗುವುದು. ವರ್ಗಾವಣೆ ಪತ್ರಕ್ಕಾಗಿ ವಿದ್ಯಾರ್ಥಿ ತಾನು ಸೇರಿದ ಕಾಲೇಜಿನ ಮುಖ್ಯಾಧಿಕಾರಿಯ ಮೂಲಕ ಅರ್ಜಿ ಸಲ್ಲಿಸಬೇಕು.

## ಟಿ.ಸಿ.ಯನ್ನು ಕಳುಹಿಸಲು ಕೆಳಕಂಡ ಬೇಡಿಕೆಗಳನ್ನು ಪೂರೈಸತಕ್ಕದ್ದು

75-00 ರೂಪಾಯಿಗಳನ್ನು ಕಾರ್ಯಾಲಯದಲ್ಲಿ ಸಲ್ಲಿಸಿ ರಸೀದಿಯನ್ನು ಅರ್ಜಿಗೆ ಲಗತ್ತಿಸಬೇಕು. ವಿದ್ಯಾರ್ಥಿ ಹಿಂದೆ ಓದಿದ ತರಗತಿಯ ಅಂಕಪಟ್ಟಿಯ ನಕಲು ಪ್ರತಿ ಸಲ್ಲಿಸಬೇಕು.

ವಿದ್ಯಾರ್ಥಿಯು ಕಾಲೇಜಿಗೆ ಶುಲ್ಕ ಅಥವಾ ದಂಡದ ರೂಪದಲ್ಲಿ ಸಂದಾಯ ಮಾಡಬೇಕಾದ ಯಾವುದೇ ಇದ್ದರೂ ವರ್ಗಾವಣೆ ಪತ್ರವನ್ನು ಕಳುಹಿಸಲಾಗುವುದಿಲ್ಲ. ಅರ್ಹತಾ ಪತ್ರವನ್ನು ನಕಲು ಮಾಡಿಕೊಂಡಾಗ ಅದಕ್ಕೆ ಗೆ ಅಧಿಕಾರಿ ಅಥವಾ ಕಾಲೇಜಿನ ಯಾವುದೇ ವಿಭಾಗ ಮುಖ್ಯಸ್ಥರುಗಳ ಸಹಿಯನ್ನು ಪಡೆಯಬಹುದು.

## ವಿದ್ಯಾರ್ಥಿ ವೇತನಗಳು ಮತ್ತು ಇತರ ಶೈಕ್ಷಣಿಕ ರಿಯಾಯಿತಿಗಳು

1. ವರ್ಷಕ್ಕೆ 1,00,000-00 ರೂಪಾಯಿಗಳಿಗಿಂತ ಕಡಿಮೆ ಆದಾಯವುಳ್ಳ ತಂದೆ ತಾಯಿಗಳ / ಪೋಷಕರ ಮಕ್ಕಳು ಶೈಕ್ಷಣಿಕ ಶುಲ್ಕ ರಿಯಾಯಿತಿ ಮತ್ತು ವ್ಯಾಸಂಗ ವೇತನಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. 2014-15 ನೇ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಆದೇಶದ ಅನ್ವಯ ಪದವಿ ಹಂತದಲ್ಲಿ ಅನುತ್ತೀರ್ಣರಾಗದ ಹಾಗೂ ಯಾವು ವಿದ್ಯಾರ್ಥಿ ವೇತನವನ್ನು ಪಡೆಯದ ವಿದ್ಯಾರ್ಥಿನಿಯರಿಗೆ ಬೋಧನ ಮತ್ತು ಪ್ರಾಯೋಗಿಕ ಶುಲ್ಕದಲ್ಲಿ ಸಂಪೂರ್ಣ ವಿನಾಯಿತಿ ನೀಡಲಾಗಿದೆ.

**ಭಾರತ ಸರ್ಕಾರದ ವಿದ್ಯಾರ್ಥಿ ವೇತನಗಳು**

1) ಪರಿಶಿಷ್ಟ ಜಾತಿ, ಪರಿಶಿಷ್ಟವರ್ಗಕ್ಕೆ ಭಾರತ ಸರ್ಕಾರದ ವಿದ್ಯಾರ್ಥಿ ವೇತನ
2) ರಾಷ್ಟ್ರೀಯ ವಿದ್ಯಾರ್ಥಿ ವೇತನ
3) ಅಧ್ಯಾಪಕರ ಮಕ್ಕಳಿಗಾಗಿ ರಾಷ್ಟ್ರೀಯ ವಿದ್ಯಾರ್ಥಿ ವೇತನ
4) Inspire ವಿದ್ಯಾರ್ಥಿ ವೇತನ

**ಕರ್ನಾಟಕ ಸರ್ಕಾರದ ವಿದ್ಯಾರ್ಥಿ ವೇತನಗಳು**

1) ಗತಿಸಿದ ಸರ್ಕಾರಿ ನೌಕರರ ಮಕ್ಕಳಿಗೆ ವಿಶೇಷ ವಿದ್ಯಾರ್ಥಿ ವೇತನ
2) ಪರಿಶಿಷ್ಟಜಾತಿ, ಪರಿಶಿಷ್ಟವರ್ಗ ಮತ್ತು ಇತರೆ ಹಿಂದುಳಿದ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ.
3) ಹಿಂದುಳಿದ ವರ್ಗ, ಗಿರಿಜನರಾಗಿ ವಿದ್ಯಾರ್ಥಿ ವೇತನ ಹಾಗೂ ಶುಲ್ಕ ರಿಯಾಯಿತಿಗಳು.
4) ರಕ್ಷಣಾ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವವರ ಮಕ್ಕಳು ಮತ್ತು ಅವರನ್ನು ಅವಲಂಬಿಸುವವರಿಗೆ ಶುಲ್ಕ ವಿನಾಯಿತಿ ಮೊದಲಾದ ಸೌಲಭ್ಯಗಳು.
5) ಅಂಗವಿಕಲರಿಗಾಗಿ ವಿದ್ಯಾರ್ಥಿ ವೇತನ
6) ಸರ್ ಸಿ.ವಿ.ರಾಮನ್ ವಿದ್ಯಾರ್ಥಿ ವೇತನ.
7) ಸಂಚಿ ಹೊನ್ನಮ್ಮ ವಿದ್ಯಾರ್ಥಿನಿ ವೇತನ
8) ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವಿದ್ಯಾರ್ಥಿ ವೇತನ
9) ರಾಜೀವ್ ಗಾಂಧಿ ಸಾಲ ರೂಪದ ವಿದ್ಯಾರ್ಥಿ ವೇತನ

**ಶ್ರೀಮತಿ ಸಿ.ಎಸ್.ಕಾಂತಲಕ್ಷ್ಮಿ ಸಂಜೀವಮೂರ್ತಿ ವಿದ್ಯಾರ್ಥಿ ವೇತನ**

ದ್ವಿತೀಯ ಪದವಿ ಪರೀಕ್ಷೆಯಲ್ಲಿ ಇಂಗ್ಲೀಷ್, ಕನ್ನಡ, ಹಿಂದಿ ಮತ್ತು ಸಂಸ್ಕೃತದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮತ್ತು **ಪದವಿ ಪರೀಕ್ಷೆಯಲ್ಲಿ ಗಣಿತ ಶಾಸ್ತ್ರದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ** ವಿದ್ಯಾರ್ಥಿಗಳಿಗೆ ಕೊಡಲಾಗುವುದು

**ಹೊರಹೋಗುವ ಉತ್ತಮ ಕ್ರೀಡಾಪಟುವಿಗೆ ಸಚ್ಚಿದಾನಂದ ವಿದ್ಯಾರ್ಥಿ ವೇತನ**

**ಎಂ.ಎಸ್.ಸರಸ್ವತಿ ಸ್ಮಾರಕ ಪ್ರಶಸ್ತಿ -**

ಇದನ್ನು ನಾಲ್ಕನೇ ಸೆಮಿಸ್ಟರ್‌ನಲ್ಲಿ ಕನ್ನಡ ಭಾಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ.

**ಶ್ರೀ ದೇವರಾಜು ವಿದ್ಯಾರ್ಥಿ ವೇತನ -ಲಿಖಿತ ರಸಪ್ರಶ್ನೆ ವಿಜೇತರಿಗೆ**

**ಶ್ರೀಮತಿ ನಾಗಮಣಿ ಪಿ.ಜಿ.ಪ್ರಕಾಶ್ ವಿದ್ಯಾರ್ಥಿ ವೇತನ -**

ಬಿ.ಎಸ್ಸಿ., ಪದವಿಯಲಿ ಉನ್ನತ ಅಂಕ ಪಡೆದ ವಿದ್ಯಾರ್ಥಿಗಳಿಗೆ ನೀಡಲಾಗುವುದು.

**9. ಶ್ರೀ ಎಸ್.ಆರ್.ಮಲ್ಲಪ್ಪ ವಿದ್ಯಾರ್ಥಿ ವೇತನ :**

ಈ ವಿದ್ಯಾರ್ಥಿ ವೇತನವನ್ನು ಆರ್ಥಿಕವಾಗಿ ಹಿಂದುಳಿದ ಐವರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡಲಾಗುವುದು.

**10. ಸೀತಾರಾಂ ಜಿಂದಾಲ್ ಫೌಂಡೇಶನ್ ವಿದ್ಯಾರ್ಥಿ ವೇತನ :**

ಹೆಚ್ಚಿನ ವಿವರಗಳಿಗೆ www.sitaramjindalfoundation.org ಅಂತರ್ಜಾಲ ವಿಳಾಸವನ್ನು ವೀಕ್ಷಿಸಿ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು

The Trustee, Sitaram Jindal foundation

Jindalnagar, Tumkur road, **Bangalore** - 560073. **ಈ ವಿಳಾಸಕ್ಕೆ ಕಳುಹಿಸಿಕೊಡಬೇಕು.**

11. ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಕಲ್ಪತರು ವಿದ್ಯಾ ಸಂಸ್ಥೆಯು ಸನ್ಮಾನಿಸಿ ಬಹುಮಾನ ನೀಡುತ್ತದೆ.

12. ಪ್ರತಿ ವಿಷಯಗಳಲ್ಲಿ ಉನ್ನತ ಅಂಕ ಪಡೆದವರಿಗೆ ಆಯಾ ವಿಭಾಗಗಳ ವತಿಯಿಂದ ಬಹುಮಾನ ನೀಡಲಾಗುವು

13. **ಆನೇಕಟ್ಟೆ ಮಲ್ಲಯ್ಯ ಮತ್ತು ಗಂಗಮ್ಮನವರ ಸ್ಮಾರಕ ವಿದ್ಯಾರ್ಥಿ ವೇತನ** :
ಮೂರೂ ವರ್ಷಗಳಿಂದ ರಸಾಯನಶಾಸ್ತ್ರ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ನೀಡಲಾಗ

14. **ಡಿ.ಜಿ.ಎ.ಸ್. ಗುರುಸಿದ್ಧಪ್ಪ ಛಾರಿಟೀಸ್ ಟ್ರಸ್ಟ್, ಬೆಂಗಳೂರು,** - ಇವರು
ಪ್ರತಿಭಾವಂತ, ಆರ್ಥಿಕ ಹಿಂದುಳಿದವರಿಗೆ ನೀಡುವ ವಿಶೇಷ ವಿದ್ಯಾರ್ಥಿ ವೇತನ.

**15.ಕ್ರೀಡಾ ಬಹುಮಾನಗಳು :**

ಅ) ಕಲ್ಪತರು ವಿದ್ಯಾಸಂಸ್ಥೆಯಿಂದ ರಾಜ್ಯ ಮಟ್ಟದಲ್ಲಿ ಕಾಲೇಜನ್ನು ಪ್ರತಿನಿಧಿಸುವ ಕ್ರೀಡಾಪಟುವಿಗೆ 500-00 ರೂ.ಗಳ ಪ್ರೋತ್ಸಾಹಕ ಬಹುಮಾನವನ್ನು ಮತ್ತು ರಾಷ್ಟ್ರ ಮಟ್ಟದಲ್ಲಿ ಕಾಲೇಜನ್ನು ಪ್ರತಿನಿಧಿಸುವ ಕ್ರೀಡಾಪಟುವಿಗೆ 1000-00 ರೂ.ಗಳ ಪ್ರೋತ್ಸಾಹಕ ಬಹುಮಾನವನ್ನು ನೀಡಲಾಗುವುದು.

ಆ) ಶ್ರೀ ಡಿ.ಎಸ್.ಸಚ್ಚಿದಾನಂದ ಕ್ರೀಡಾ ಬಹುಮಾನ :
ಕಾಲೇಜಿನ ಅತ್ಯುತ್ತಮ ಪುರುಷ ಮತ್ತು ಮಹಿಳಾ ಕ್ರೀಡಾ ಪಟುಗಳಿಗೆ ಪ್ರತಿ ವರ್ಷ ಈ ಬಹುಮಾನ ನೀಡಲಾಗುವುದು.

ಇ) ಕಾಲೇಜಿನಿಂದ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ ಎಲ್ಲಾ ಕ್ರೀಡಾಪಟುಗಳಿಗೂ ಬಹುಮಾನ ನೀಡಲಾಗು

## ಪ್ರವೇಶ ಸಂದರ್ಭದಲ್ಲಿ ವಿದ್ಯಾರ್ಥಿಗಳು ನೀಡಬೇಕಾದ ಪ್ರಮಾಣ ಪತ್ರಗಳು ....

1. ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರಗಳು - 4

2. ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ ಅಟೆಸ್ಟೆಡ್ ಜೆರಾಕ್ಸ್ ಪ್ರತಿ - 1

3. ದ್ವಿತೀಯ ಪಿ.ಯು.ಸಿ.ಯ ಮೂಲ ಅಂಕ ಪಟ್ಟಿ ಮತ್ತು ಅಟೆಸ್ಟೆಡ್ ಜೆರಾಕ್ಸ್ ಪ್ರತಿಗಳು

4. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮೂಲ ಪ್ರತಿ ಮತ್ತು ಅಟೆಸ್ಟೆಡ್ ಜೆರಾಕ್ಸ್ ಪ್ರತಿಗಳು - 1
(ಶುಲ್ಕ ರಿಯಾಯಿತಿ ಬಯಸುವ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ)

5. ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ (ಸ್ವಯಂ ದೃಢೀಕರಿಸುವುದು) 1

6. BANK Pass Book ಜೆರಾಕ್ಸ್ ಪ್ರತಿ (ಸ್ವಯಂ ದೃಢೀಕರಿಸುವುದು)1

# Kalpataru First Grade Science College, Tiptur.

## Tumkur University

### RANK LIST FROM 2010 TO 2021

| Year | Student Name | Combination | Rank |
|---|---|---|---|
| 2010 | R. MADHURA | PMCs | 05 |
| | B.C. PRATHIBHA | PMCs | 02 |
| 2011 | ASHWINI KUMARI | PMCs | 04 |
| | P.R. VEENA | PCM | 05 |
| | H.S. MADHUSHREE | CBZ | 07 |
| | P.G. KAVYASHREE | PCM | 08 |
| 2012 | K.V. BHAVYA | PCM | 06 |
| | D.A.NANDINI | PCM | 07 |
| | P.D. KAALIPRASAD | PCM | 09 |
| | H. BHARATH | CBZ | 10 |
| 2013 | S.B. NAVEENA | PME | 01 |
| | B.R. RAMITHA | PCM | 04 |
| | S.B. RAJEEVA | CBZ | 05 |
| | C.H. KAVYA | PMCs | 07 |
| | CHANDANA KUMARI | PME | 10 |
| 2014 | B. KOUSALYA | CBZ | 04 |
| | G.S. CHAITRA | CBZ | 11 |
| 2016 | R. JHOSNA | PME | 04 |
| | H.P. BHARATHI | PCM | 06 |
| | K.N. LAVANYA | PCM | 07 |
| | M.C. POOJA | CBZ | 10 |
| 2017 | T.S. SUMAN | PMCs | 05 |
| | K.S. KAVYA | PMCs | 08 |
| 2018 | CHIRAG S. | PME | 01 |
| | MOOKAMBIKA N. | BCA | 04 |
| | BALAJI K.M. | CBZ | 05 |
| 2019 | RAKSHITH UPPAR H.S. | CBZ | 02 |
| | MEGHANA C.P. | PMCs | 08 |
| | MEGHANA P.S. | CBZ | 06 |
| | SUNAYA N. | BCA | 10 |
| 2020 | DHANUSHREE M. | PME | 02 |
| | BASAVARAJU N.S. | PCM | 04 |
| 2021 | MEGHANA H.S. | PCM | 02 |
| | BHAVYA P. | CBZ | 06 |

# VISION

The College seeks :

* To accomplish a diverse, progressive educational environment enriching the lives of students, employees and community.
* To emerge as one of the nation's pre-eminent, premier institutions that moulds the character and future of rural India.
* To induce a paradigm shift in community that education is prerequisite for human development.

# MISSION

* In light of the college's vision, its mission is represented in offering high quality education to its students, especially to those in the rural sector in the emerging information age.
* The college imparts knowledge, skills and values that are so essential to the educated and responsible citizens.
* The college will strive to attract a faculty that will bring distinction and stature to the institution.
* College works on developing the student's personality that would make him / her capable of innovation, facing challenges, leadership, self-learning, team working and competitiveness. The college is committed to provide a culturally competent and sensitive environment that reflects and celebrates diversity.

# CORE VALUES

We value

* Respect, honesty and integrity
* Diversity in all its dimensions (idea, people, places)
* Inquisitiveness, free and open exchange of ideas
* Academic excellence and integrity.
* Outstanding teaching and service
* Scholarly research and professional leadership.

Kalpataru Vidya Samthe (R.)

# Kalpataru First Grade Science College, Tiptur.

## ANTI RAGGING POLICY

Ragging is a criminal offence as per the Supreme Court verdict. Ragging is a offence under penal code and under section 116 of the Karnataka Education Act 198 (Karnataka Act N. 1 of 1995) Ragging in all its forms totally banned in this institutio including in its departments, constituents units, all its premises (academic, residential sports, kiosks, cafeteria and the liek) whether located within the campus or outside and in all means of transportation of students whether public or private. The institutions shall take strict action including but not limited to criminal proceeding and / or cancella tion of admission of against those found guilty of ragging and / or of abetting ragging and the burden of proof shall hereby lie on the perpetrator of alleged ragging and not on the victim. An offence of ragging may be charged either on a written complaint by the affected or on independent finding of the Anti Ragging Squad. The institution is bound by the UGS Regulation on Curbing the Menace of Ragging in Higher Educational Institutions 2009.

## ರ್‍ಯಾಗಿಂಗ್ ತಡೆ ನೀತಿ

ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ರ್‍ಯಾಗಿಂಗ್ ಒಂದು ಕ್ರಿಮಿನಲ್ ಅಪರಾಧವಾಗಿರುತ್ತದೆ. ಕರ್ನಾಟಕ ಶಿಕ್ಷಣ ಕಾಯಿದೆ 1983 ರ 116 ನೇ ಪ್ರಕರಣದ ಪ್ರಕಾರವು ರ್‍ಯಾಗಿಂಗ್ ಅಪರಾಧವಾಗಿರುತ್ತದೆ. ಈ ಸಂಸ್ಥೆಯು ಎಲ್ಲಾ ಘಟಕಗಳಲ್ಲಿ (ಶೈಕ್ಷಣಿಕ, ವಸತಿಗೃಹ, ಕ್ರೀಡಾ ಚಟುವಟಿಕೆ, ಉಪಹಾರ ಗೃಹ, ಮಾಹಿತಿ ಕೇಂದ್ರ ಮೊದಲಾದ ಕಡೆ) ರ್‍ಯಾಗಿಂಗ್ ನಿಷೇಧಿಸಿದೆ. ಸಂಸ್ಥೆಯ ಆವರಣದಲ್ಲಿ ಹಾಗೂ ವಿದ್ಯಾರ್ಥಿಗಳು ಬಳಸುವ ಸಾರ್ವಜನಿಕ ಹಾಗೂ ಖಾಸಗಿ ಸಾರಿಗೆ ವ್ಯವಸ್ಥೆಯಲ್ಲಿಯೂ ರ್‍ಯಾಗಿಂಗ್ ನಿಷೇಧಿಸಲ್ಪಟ್ಟಿದೆ. ರ್‍ಯಾಗಿಂಗ್‌ನಲ್ಲಿ ಭಾಗಿಯಾಗಿರುವ ಹಾಗೂ ಅದನ್ನು ಪ್ರೋತ್ಸಾಹಿಸುವ ವ್ಯಕ್ತಿಗಳ ವಿರುದ್ಧ ಬಾಧೆಗೊಳಗಾದ ವ್ಯಕ್ತಿಗಳು ದಾಖಲಿಸುವ ಲಿಖಿತ ದೂರಿನ ಅನ್ವಯವಾಗಲಿ ಶಿಸ್ತು ಕ್ರಮ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಈ ಸಂಸ್ಥೆಯು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರ್‍ಯಾಗಿಂಗ್ ಅನ್ನು ನಿರ್ಬಂಧಿಸುವ ಯು.ಜಿ.ಸಿ. ನಿಯಮಾವಳಿ 2009 ಗೆ ಬದ್ಧವಾಗಿರುತ್ತದೆ.

antiragging helpline : 18001805522

email : helpline@antiragging.in



OUTDOOR STADIUM



BOTANY DEPT.



PHYSICS DEPT.



ZOOLOGY DEPT.



CHEMISTRY DEPT.



ELECTRONICS DEPT.



MATHEMATICS DEPT.



COMPUTER SCIENCE DEPT.

# ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು

## 2020ನೇ ಸಾಲಿನ ತುಮಕೂರು ವಿಶ್ವವಿದ್ಯಾಲಯದಿಂದ ರ್‍ಯಾಂಕ್ ಪಡೆದ ನಮ್ಮ ಕಾಲೇಜಿನ ವಿದ್ಯಾರ್ಥಿಗಳು



**Dhanushree M.G.**
PME - 91.03%
2nd RANK



**Basavaraju N.S.**
PCM - 90.82%
4th RANK

## 2021ನೇ ಸಾಲಿನ ತುಮಕೂರು ವಿಶ್ವವಿದ್ಯಾಲಯದಿಂದ ರ್‍ಯಾಂಕ್ ಪಡೆದ ನಮ್ಮ ಕಾಲೇಜಿನ ವಿದ್ಯಾರ್ಥಿಗಳು



Meghana H.S.
PCM- 94.11%
2nd RANK



Bhavya C.
CBZ - 89.95%
6th RANK